# ಡಾ. ಮಳಲಿ ವಸಂತಕುಮಾರ್

## ವ್ಯಕ್ತಿ ಪರಿಚಯ



ಡಾ. ಟಿ. ಕೆ. ಕೆಂಪೇಗೌಡ

ಜನಪ್ರಿಯ ಜಾನಪದ ಪುಸ್ತಕ ಮಾಲೆ–೫೦

# ಡಾ. ಮಳಲಿ ವಸಂತಕುಮಾರ್

## ವ್ಯಕ್ತಿ ಪರಿಚಯ

ಡಾ॥ ಟಿ. ಕೆ. ಕೆಂಪೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪

**Dr. Malali Vasanthakumar- A Pen Portrait-** By **Dr. T. K. Kempegowda.** Pulished by **Karnataka Janapada Parishath,**
No. 1, Jaladarshini Layout, Near M. S. Ramaiah Hospital Gate,
New BEL Road, Bangalore-560 054,
Phone : 080-23605033. Janapada Loka : 7201143.

ಪ್ರಥಮ ಮುದ್ರಣ : ೨೦೧೦    ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : ರೂ. ೧೦ (ಹತ್ತು ರೂಪಾಯಿ)

**ಹಕ್ಕುಗಳು : ಲೇಖಕರಿಗೆ ಸೇರಿವೆ**

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ॥ ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು :

**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಲೇಖಕರಾದ **ಡಾ|| ಟಿ. ಕೆ. ಕೆಂಪೇಗೌಡ** ಅವರು **ಡಾ. ಮಳಲಿ ವಸಂತಕುಮಾರ್** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧-೫-೨೦೦೦

# ಡಾ. ಮಳಲಿ ವಸಂತಕುಮಾರ್

ಬದಲಾಗುತ್ತಿರುವ ಜಾನಪದ ಅಧ್ಯಯನದ ಸಂದರ್ಭದಲ್ಲಿ ಡಾ॥ ಮಳಲಿ ವಸಂತಕುಮಾರ್ ಅವರದು ಗಮನಾರ್ಹವಾದ ಹೆಸರು. ಕನ್ನಡದ ಸುಪ್ರಸಿದ್ಧ ಸಾಹಿತಿಗಳು, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ದಕ್ಷ ಆಡಳಿತಗಾರರು; ನಾಡು-ನುಡಿಗಳ ಪರವಾಗಿ ಸದಾ ದನಿಯೆತ್ತುತ್ತ ಬಂದಿರುವ ಹೋರಾಟಗಾರರು. ಜನಪ್ರಿಯ ವಾಗ್ಮಿಗಳು ಆಗಿ ಕನ್ನಡ ನಾಡು-ನುಡಿಯ ಸೇವೆಯನ್ನು ಮೈಗೂಡಿಸಿಕೊಂಡವರು. ಅವರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿರುವ ಕೊಡುಗೆ ವಿಶಿಷ್ಟವಾದುದು.

ಡಾ॥ ಮಳಲಿ ವಸಂತಕುಮಾರ್ ಹುಟ್ಟಿದ್ದು 06-08-1945ರಂದು. ಹಾಸನ ಜಿಲ್ಲೆಯ ಮಳಲಿ ಹುಟ್ಟೂರು. ತಂದೆ : ಪಟೇಲ್ ಚಿಕ್ಕೇಗೌಡ. ತಾಯಿ: ದೇವಮ್ಮ ದಂಪತಿಗಳ ಮಗನಾಗಿ ಜನಿಸಿದರು. ತಂದೆಯ ಮಾರ್ಗದರ್ಶನದಲ್ಲಿ ಹುಟ್ಟೂರಿನಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಮುಗಿಸಿ, ಸಾಹಿತ್ಯ, ಸಂಸ್ಕೃತಿ ಸಂಪನ್ನರ ಬೀಡು ಎಂದೇ ಪ್ರಸಿದ್ಧಿಯಾದ ಮೈಸೂರಿಗೆ ಬಂದು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದರು (1967). ಅನಂತರ ಮಂಗಳೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಎ. ಪದವಿಯನ್ನು 1970ರಲ್ಲಿ ಪಡೆದರು. ಅನಂತರ ದೂರದ ಮದರಾಸು ವಿಶ್ವವಿದ್ಯಾನಿಲಯದಿಂದ ಎಂ.ಫಿಲ್. ಪದವಿಯನ್ನು ಪಡೆದು, ಅನಂತರ ಮೈಸೂರಿಗೆ ವಾಪಸ್ಸಾಗಿ 'ಕುವೆಂಪು ಅವರ ನಾಟಕಗಳು' ಎಂಬ ವಿಷಯದ ಮೇಲೆ ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದವರು.

ಸ್ವತಃ ಓದಿದ ಕಾಲೇಜಾದ ಮಹಾರಾಜ ಕಾಲೇಜಿನಲ್ಲಿಯೇ ಕನ್ನಡ ಅಧ್ಯಾಪಕರಾಗಿ ಸೇವೆಸಲ್ಲಿಸುವ ಅದೃಷ್ಟ ಮಳಲಿ ಅವರಿಗೆ ದೊರಕಿತು. ಅನಂತರದಲ್ಲಿ ಯುವರಾಜ ಕಾಲೇಜಿನಲ್ಲಿ ಉಪ ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಹೇಮಗಂಗೋತ್ರಿ, ಮಂಡ್ಯ ಸ್ನಾತಕೋತ್ತರ ಕೇಂದ್ರಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಬೋಧನಾಕ್ಷೇತ್ರದಲ್ಲಿ ಬಹುದೊಡ್ಡ ಹೆಸರುಮಾಡಿದರು. ಹೇಮಗಂಗೋತ್ರಿಯನ್ನು ಕಟ್ಟಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕರ್ನಾಟಕದ ಉದ್ದಗಲಕ್ಕೂ ಅಪಾರ ಶಿಷ್ಯಸಂಕುಲವನ್ನು

ಹೊಂದಿದ್ದಾರೆ. ಬೋಧನೆಯ ಜೊತೆಗೆ ಉತ್ತಮ ಆಡಳಿತಗಾರರು, ಅತ್ಯುತ್ತಮ ಸಂಶೋಧಕರು, ಪ್ರಗತಿಪರ ಕೃಷಿಕರು, ಹಲವಾರು ಸಂಘ-ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿರಂತರವಾಗಿ ದುಡಿಯುತ್ತಿದ್ದಾರೆ. ಭಾಷಾ ಸಮಸ್ಯೆ, ಗಡಿನಾಡ ಸಮಸ್ಯೆ, ಶಾಸ್ತ್ರೀಯ ಭಾಷೆಯ ಬಗ್ಗೆ ಸದಾ ಸ್ಪಂದಿಸುತ್ತಾ ಬಂದವರು. ಡಾ॥ ದೇಜಗೌ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾಗ ಕುಲಪತಿಗಳ ಆಪ್ತ ಕಾರ್ಯದರ್ಶಿಗಳಾಗಿ ಸೇವೆಸಲ್ಲಿಸಿದ್ದಾರೆ. 1986 ರಿಂದ 1987ರಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕ್ರಿಯಾಶೀಲರಾಗಿ ದುಡಿದಿದ್ದಾರೆ. ವಿಶ್ವವಿದ್ಯಾನಿಲಯ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿಗಳಲ್ಲಿ ಹಾಗೂ ಹಲವಾರು ಕಮ್ಮಟಗಳಲ್ಲಿ ಪ್ರಬಂಧ ಮಂಡನೆ ಮಾಡಿದ್ದಾರೆ. ಫಿನ್‌ಲೆಂಡ್ ಇಂಡಿಯಾ ಅಂತರರಾಷ್ಟ್ರೀಯ ಜಾನಪದ ಸಮಾವೇಶದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇವರ ಮಾರ್ಗದರ್ಶನದಲ್ಲಿ ಹತ್ತು ಅಭ್ಯರ್ಥಿಗಳು ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಆರು ಜನ ಎಂ.ಫಿಲ್. ಪದವಿ ಪಡೆದಿದ್ದಾರೆ. ಎಂ.ಫಿಲ್. ವಿದ್ಯಾರ್ಥಿಗಳಿಗೆ ಬೋಧಕರಾಗಿ ಕೆಲಸಮಾಡುತ್ತಿದ್ದಾರೆ.

ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಅವರು ತಮ್ಮ ಸಾಧನೆಯ ಮೇಲ್ಮೆಯನ್ನು ಮೆರೆದಿದ್ದಾರೆ. ಕಾವ್ಯ, ಕಥೆ, ನಾಟಕ, ವಿಮರ್ಶೆ, ಸಂಶೋಧನೆ, ಜಾನಪದ ಮತ್ತು ಸಂಪಾದನೆಗೆ ಸಂಬಂಧಿಸಿದಂಥೆ ನಲ್ವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದಾರೆ. ಗೋಕಾಕ್ ವರದಿಗೆ ಸಂಬಂಧಿಸಿದಂತೆ ಅವರ ಹೋರಾಟ ಚರಿತ್ರಾರ್ಹವಾದುದು. ಆ ಸಂದರ್ಭದಲ್ಲಿ ಬಂಧನಕ್ಕೂ ಒಳಗಾಗಿದ್ದರು.

ಸಾಹಿತ್ಯಕೃಷಿಯಲ್ಲಿ ಮಾತ್ರವಲ್ಲದೆ ಅಕ್ಷರಶಃ ತೋಟಗಾರಿಕೆ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿದ್ದಾರೆ. ತಮ್ಮ ಸಹೃದಯತೆ, ಸೌಜನ್ಯ, ಪ್ರಾಮಾಣಿಕತೆ, ಸರಳ ಪ್ರವೃತ್ತಿಗಳಿಂದ ಅವರು ಬಹುಮಂದಿಯ ಮನಗೆದ್ದುಕೊಂಡಿದ್ದಾರೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಹೊಯ್ಸಳ ಪ್ರಶಸ್ತಿ, ಸಾಹಿತ್ಯ ರತ್ನ ಹೀಗೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಡಾ॥ ಮಳಲಿ ಅವರು ವೃತ್ತಿ ಆರಂಭಿಸಿದಾಗ ಉತ್ತಮ ಸಾಹಿತ್ಯ ಪರಿಸರದ ನಂಟು ಇವರಿಗಿತ್ತು. ಅದು ಇಂದಿಗೂ ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿದೆ. ಇವರ ಬರಹ ಹಾಗೂ ವಿದ್ವತ್ತನ್ನು ಗಮನಿಸಿದ ಹಿರಿಯ ವಿದ್ವಾಂಸರುಗಳಾದ ರಾಷ್ಟ್ರಕವಿ ಕುವೆಂಪು, ಪ್ರೊ. ದೇಜಗೌ, ಡಾ॥ ಹಾ.ಮಾ.ನಾ., ಡಾ॥ ಸಿ.ಪಿ.ಕೆ., ಗೊರೂರು ಮೊದಲಾದವರು ಸೋಪಜ್ಞತೆ ಸೃಜನಶೀಲತೆಯನ್ನು ತುಂಬಿದ್ದರಿಂದ ಕನ್ನಡಿಗರ ಮನಸ್ಸಿನಲ್ಲಿ ಹೆಸರುವಾಸಿಯಾಗಿದ್ದಾರೆ.

ಜಾನಪದ ರಂಗದಲ್ಲಿ ಡಾ॥ ಮಳಲಿ ಅವರ ಕಾರ್ಯ ಮನನೀಯವಾದುದು. ಹಳ್ಳಿಗಾಡಿನಿಂದ ಬಂದ ಅವರ ಚೇತನದಲ್ಲಿ ಜಾನಪದ ಪ್ರಜ್ಞೆ ಮತ್ತು ಸೊಗಡು ಸಹಜವಾಗಿಯೇ ದಟ್ಟವಾಗಿದೆ. ಮಳಲಿಯವರು ಇದುವರೆವಿಗೂ ಸಂಗ್ರಹಿಸಿ, ಸಂಪಾದಿಸಿರುವ ಜಾನಪದ ಕೃತಿಗಳೆಂದರೆ 'ಮಳಲಿ ಗಿಡ್ಡಮ್ಮ', 'ಕೋಲು ಪದಗಳು', 'ಜನಪದ ವೈದ್ಯ' ಮತ್ತು ಪ್ರೊ. ರಾಗೌ ಅವರೊಂದಿಗೆ ಸಂಪಾದಿಸಿರುವ 'ಜನಪದ ನಂಬಿಕೆಗಳು' ಅಲ್ಲದೆ ಬಿಡಿ ಲೇಖನಗಳು ಪ್ರಕಟಗೊಂಡಿವೆ.

ಹಾಸನ ಜಿಲ್ಲೆ ಬಹಳ ಹಿಂದಿನಿಂದಲೂ ಸಾಹಿತ್ಯ ಕಲೆ, ಸಂಸ್ಕೃತಿಯಲ್ಲಿ ಸಮೃದ್ಧತೆಯ ಜಿಲ್ಲೆ. ಗೊರೂರು, ಎಸ್. ವಿ. ರಂಗಣ್ಣ, ಎಲ್. ಗುಂಡಪ್ಪ, ಮತಿಘಟ್ಟ ಕೃಷ್ಣಮೂರ್ತಿ, ಎಸ್. ಕೆ. ಕರೀಂಖಾನ್, ಎಚ್. ಜೆ. ಲಕ್ಕಪ್ಪಗೌಡರು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರೂ ಪ್ರೊ. ಹಿ. ಶಿ. ರಾಮಚಂದ್ರೇಗೌಡ ಹಾಗೂ ಡಾ॥ ಮಳಲಿ ಅವರು ಜಾನಪದ ಕ್ಷೇತ್ರದಲ್ಲಿ ವಿಭಿನ್ನವಾಗಿ ಕೆಲಸ ಮಾಡಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಕೆಲಸಮಾಡಲು ಮುಖ್ಯ ಪ್ರೇರಣೆ ಅವರಿಗೆ ಹುಟ್ಟಿನಿಂದಲೇ ಬಂದ ಸಮೃದ್ಧ ಗ್ರಾಮೀಣ ಸಂಸ್ಕೃತಿಯನ್ನು ಅಪ್ಪಿಕೊಂಡಿದ್ದು, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದ ಜಾನಪದ ವಿದ್ವಾಂಸರ ಪ್ರೇರಣೆಯೇ ಇವರ ಬರಹಗಳು ಹೊರಬಹರಲು ಸ್ಫೂರ್ತಿಯಾಯಿತು.

ಡಾ॥ ಮಳಲಿ ಅವರ ಜಾನಪದ ಸಂಗ್ರಹಗಳು ಕರ್ನಾಟಕ ಜಾನಪದದ ಸಂದರ್ಭದಲ್ಲಿ ಪ್ರಥಮ ದಾಖಲೆಗಳಾಗಿವೆ. ಜನಪದ ವೈದ್ಯ ಪದ್ಧತಿ, ಕೋಲಾಟ ಮತ್ತು ಜನಪದ ನಂಬಿಕೆಗಳನ್ನು ಮೊಟ್ಟಮೊದಲಿಗೆ ಪರಿಚಯಿಸಿದವರು. ಮಳಲಿಯವರು ಜಾನಪದ ಸಂಗ್ರಹಕ್ಕಷ್ಟೇ ಸೀಮಿತಗೊಳಿಸಿಕೊಳ್ಳದೆ ಜಾನಪದವನ್ನು ಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ ಅಧ್ಯಯನ ಮಾಡಿ ವಿಶ್ಲೇಷಣೆ ಮಾಡಿದ್ದಾರೆ. ಇದಕ್ಕೆ ಮುಖ್ಯವಾದ ಮುಖ್ಯ ಸಾಕ್ಷಿ ಜಾನಪದ ಸಂಕಲನಗಳನ್ನು

ವಿದ್ವತ್ಪೂರ್ಣ ಮುನ್ನುಡಿಗಳೊಂದಿಗೆ ಹೊರತಂದಿರುವುದು. ಜನಪದ ಸಾಹಿತ್ಯವನ್ನು ಪರಿಣಾಮಕಾರಿಯಾಗಿ, ಅರ್ಥಪೂರ್ಣವಾಗಿ ಓದುಗರಿಗೆ ಪರಿಚಯಿಸಿಕೊಟ್ಟ ಕೃತಿ ಎಂದರೆ 'ಮಳಲಿ ಗಿಡ್ಡಮ್ಮ'. ಜಾನಪದ ಜಗತ್ತನ್ನು ಪ್ರವೇಶಿಸಿದ್ದು ಈ ಕೃತಿಯ ಮುಖೇನವೇ. ಜಾನಪದವನ್ನು ವೈಜ್ಞಾನಿಕ ವಿಷಯವಾಗಿ ನೋಡಬಲ್ಲ, ಅದರ ಸಿದ್ಧಾಂತಪರ ವಿಚಾರಗಳನ್ನು ಅರಿತು ಜಾನಪದವನ್ನು ಸಂಗ್ರಹಿಸುವ ಕೆಲಸವನ್ನು ವೈಜ್ಞಾನಿಕವಾಗಿ ರೂಢಿಸಿಕೊಂಡಿದ್ದಾರೆ.

'ಮಳಲಿ ಗಿಡ್ಡಮ್ಮ' ಕೃತಿ ಎಪ್ಪತ್ತರ ದಶದಕದಲ್ಲಿಯೇ ಪ್ರಕಟವಾದ ಕೃತಿ. ವಿದ್ಯಾರ್ಥಿ ದಿಶೆಯಲ್ಲಿಯೇ ರಚಿಸಿದ ಹುಟ್ಟೂರಿನ ಗ್ರಾಮ ದೇವತೆಯನ್ನು ಕುರಿತ ಕೃತಿ. ಗ್ರಾಮೀಣ ಪ್ರದೇಶದ ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡಿರುವ ಈ ಕೃತಿಯಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಒಟ್ಟಂದದಲ್ಲಿ ಮೇಳೈಸಿರುವುದು ಕೂಡ ವಿಶಿಷ್ಟವೇ ಆಗಿದೆ. ಈ ಕೃತಿಯು ಜನತೆಯ ಜೀವಂತ ಸಂಸ್ಕೃತಿಯಿಂದ ನಿರ್ದಿಷ್ಟ ಮುಖದಲ್ಲಿ ನೋಡುವ ಒಂದು ಸಮಗ್ರವೂ ಸಮರ್ಥವೂ ಆದ ಸಂಪಾದನೆ ಆಗಿದೆ. ಈ ಕೃತಿಯಲ್ಲಿ ಒಟ್ಟು ಹತ್ತು ವಿಭಾಗಗಳಿವೆ. 'ಮಳಲಿ ಗಿಡ್ಡಮ್ಮ', 'ಪ್ರಾರ್ಥನೆಗಳು', 'ಹರಕೆ', 'ಸರ್ಪಭೂಷಿತೆ', ದೇವಿಯನ್ನು ಕುರಿತ ಇತರ ಗೀತೆಗಳು – ದೊಡ್ಡೋಳು ದೊರೆಗಿಡ್ಡಿ, ಸಣ್ಣಗುಂಡಿನೋಳೆ, ದೊಡ್ಡ ಬೀದಿಯಲ್ಲಿ ಮೆರೆಯೋಳೆ, ಕ್ಯಾಲವ್ವ, ನರಸಯ್ಯ ಇತ್ಯಾದಿ ವಿಭಾಗಗಳಿವೆ. 1970ರ ದಶಕದಲ್ಲಿ ಹೊರ ಬಂದಾಗ ಈ ಕೃತಿ ಜನಪದ ಅಧ್ಯಯನ ಆಸಕ್ತರ ಗಮನಸೆಳೆದ ಮಹತ್ವದ ಕೃತಿ. ಹಾಸನ ಜಿಲ್ಲೆಯಲ್ಲಿ 'ಮಳಲಿ ಗಿಡ್ಡಮ್ಮ' ಕ್ಷೇತ್ರ ದೇವತೆಯಾಗಿ ಪ್ರಸಿದ್ಧಿ ಪಡೆದಿದೆ. ಈ ದೇವತೆ ಮಳಲಿ ಅಥವಾ ಸುತ್ತಮುತ್ತಲ ಹಳ್ಳಿಗಷ್ಟೇ ಅಲ್ಲ, ಬಹಳ ದೂರದ ಊರುಗಳಿಂದ ಅಲ್ಲಿಗೆ ಗಾಡಿ ಕಟ್ಟಿಕೊಂಡು ಬಂದು ಕುರಿ, ಕೋಳಿ ಬಲಿಕೊಟ್ಟು ಅಡಿಗೆಮಾಡಿ ಊಟಮಾಡಿ ತಮ್ಮ ದೂರದ ಊರುಗಳಿಗೆ ತೆರಳುತ್ತಿದ್ದರಂತೆ. ಇವತ್ತಿಗೂ ಕೂಡ ಇಲ್ಲಿ ಗಾಡಿ ಹಾಗೂ ಟ್ರಾಕ್ಟರಿನಲ್ಲಿ ಈ ದೇವತೆಗೆ ಬಂದು ಹೋಗುವ ಜನರಿಗೇನೂ ಕೊರತೆ ಇಲ್ಲವಂತೆ. ಮಳಲಿ ಗಿಡ್ಡಮ್ಮ ಊರಿನಲ್ಲಿ ನೆಲೆನಿಂತ ಐತಿಹ್ಯವನ್ನು ಸ್ವಾರಸ್ಯಕರವಾಗಿ ಡಾ॥ ಮಳಲಿ ಅವರು ಬರೆದಿದ್ದಾರೆ. 'ಒಂದು ರಾತ್ರಿ ವಿಜಯನಗರದ ಸಾಹುಕಾರ ಗೌಡನೊಬ್ಬನ ಮನೆಗೆ ಮೂರು ಜನ ಕಳ್ಳರು ನುಗ್ಗುತ್ತಾರೆ. ಮೂವರಿಗೂ ಮೂರು ಪೆಟ್ಟಿಗೆ ಸಿಗುತ್ತವೆ. ಅವನ್ನು ಕದ್ದುಕೊಂಡು ಮಳಲಿ ಸಮೀಪದ

ಮಳ್ಳಳ್ಳಿ ಸಮೀಪ ಬಂದು ಪೆಟ್ಟಿಗೆಗಳನ್ನು ಒಡೆದು ನೋಡುತ್ತಾರೆ. ಒಂದು ಪೆಟ್ಟಿಗೆಯಲ್ಲಿ ನಾಣ್ಯವೂ ಇನ್ನೊಂದರಲ್ಲಿ ಚಿನ್ನಾಭರಣವೂ ಮತ್ತೊಂದು ಪೆಟ್ಟಿಗೆಯಲ್ಲಿ ಮಳಲಿ ಗಿಡ್ಡಮ್ಮನ ವಿಗ್ರಹವೂ ಇರುತ್ತವೆ. ಗಿಡ್ಡಮ್ಮನ ವಿಗ್ರಹ ದೊರೆತ ಕಳ್ಳ ಅದನ್ನು ಯಗಚಿ ಮೆಳೆಯಲ್ಲಿ ಎಸೆದು ಹೋಗುತ್ತಾನೆ. ಅದರ ಮೇಲೆ ಹುತ್ತ ಬೆಳೆಯುತ್ತದೆ. ಮಳಲಿಯ ಕಲ್ಲು ಮಾಳಿಗೆಗೌಡರ ಮನೆಯ ಆಳು ದನಗಳನ್ನು ಮೇಯಿಸಲು ಅಲ್ಲಿಗೆ ಬರುತ್ತಾನೆ. ಅವನಿಗೆ ಗೊತ್ತಿಲ್ಲದಂತೆ ಒಂದು ಹಸು ಆ ಹುತ್ತಕ್ಕೆ ತನ್ನ ಹಾಲು ಕರೆದು ಮನೆಗೆ ಹೋದಾಗ ಹಾಲಿನ ಬದಲು ರಕ್ತ ಕರೆಯುತ್ತದೆ. ಇದನ್ನು ಪರೀಕ್ಷಿಸಲಾಗಿ ನಿತ್ಯವೂ ಹಸು ಹುತ್ತಕ್ಕೆ ಹಾಲು ಕರೆದು ಬರುತ್ತಿದ್ದ ಸತ್ಯ ತಿಳಿಯುತ್ತದೆ.

ಅದೇ ದಿನ ರಾತ್ರಿ ಕಲ್ಲು ಮಾಳಿಗೆಗೌಡರಿಗೆ ಒಂದು ಕನಸು ಬೀಳುತ್ತದೆ. ಕನಸಿನಲ್ಲಿ ಒಂದು ಸ್ತ್ರೀ ದೇವತೆ ಕಾಣಿಸಿಕೊಂಡು, ತನ್ನ ಹೆಸರು ಗಿಡ್ಡಮ್ಮನೆಂದೂ ವಿಜಯನಗರದ ಕಡೆಯಿಂದ ಬಂದವಳೆಂದೂ ನಾಳೆ ಬಂದು ಮಾದರಹಳ್ಳಿಯಲ್ಲಿ ಗಿಡ್ಡಮ್ಮನೆಂಬ ಹೆಸರಿನಿಂದ ನೆಲೆಸುವೆನೆಂದೂ ಹೇಳಿದಳಂತೆ. ಅದಕ್ಕೆ ಕಲ್ಲು ಮಾಳಿಗೆಗೌಡನು 'ನೀನು ಬರುವುದಕ್ಕೆ ಸೂಚನೆ ಏನು ?' ಎಂದು ಕೇಳಲು, ನಿಮ್ಮೂರ ಹಿರಿಕೆರೆಯ ಏಳು ಕಡೆ ಏಳು ಭಾಗಗಳಾಗಿ ಒಡೆಯುವುದು ಎಂದಳಂತೆ. ಮಾರನೆಯ ದಿನ ಬೆಳಗ್ಗೆ ಊರಿಗೆ ಊರೇ ದಿಗ್ಭ್ರಮೆಗೊಂಡಿತಂತೆ. ಹಿರೇಕೆರೆ ಏಳುಭಾಗವಾಗಿ ಒಡೆದದ್ದೂ ಅಲ್ಲದೆ ದೇವಿ ಊರ ಹೊರಭಾಗದಲ್ಲಿ ದಕ್ಷಿಣ ದಿಕ್ಕಿನಲ್ಲಿ ಒಡೆದುಮೂಡಿದ್ದಳಂತೆ. ಆ ಕೆರೆ ಒಡೆದ ಗುರುತು ಇಂದಿಗೂ ಇದೆ ಎಂದು ಲೇಖಕರು ಹೇಳುತ್ತಾರೆ. ಕಲ್ಲಿ ಮಾಳಿಗೆಗೌಡರು ಇಲ್ಲಿಗೆ ಐದಾರು ತಲೆಮಾರು ಹಿಂದಿನವರಾದ್ದರಿಂದ ಈ ದೇವಾಲಯಕ್ಕೆ ಮುನ್ನೂರು ವರ್ಷಗಳ ಇತಿಹಾಸವನ್ನು ಗುರುತಿಸಿದ್ದಾರೆ.

'ಮಳಲಿ'ಯಮ್ಮ ಒಡೆದು ಮೂಡಿದ ಮೇಲೆ ಆಕೆ ಪ್ರಚಾರಕ್ಕೆ ಬಂದುದನ್ನು ಇನ್ನೊಂದು ಐತಿಹ್ಯದ ಮೂಲಕ ಗುರುತಿಸಬಹುದು. 'ದೇವಿ ಒಡೆದು ಮೂಡಿದ ಸ್ಥಳಕ್ಕೆ ಮುತ್ತುರತ್ನದ ವ್ಯಾಪಾರಿಯೊಬ್ಬ ಬಂದು ಬೀಡುಬಿಡುತ್ತಾನೆ. ಮಾರನೆ ದಿನ ಹೊರಡಲುನುವಾದಾಗ ಎತ್ತುಗಳು ಅಸ್ವಸ್ಥವಾಗುತ್ತವೆ. ಆಗ ವ್ಯಾಪಾರಿ ಇದಕ್ಕೆ ಕಾರಣ ತಿಳಿಯಲು, ಶಾಸ್ತ್ರ ಕೇಳಲು ಇಚ್ಛಿಸುತ್ತಾನೆ. ಆ ಸಮಯಕ್ಕೆ ಸರಿಯಾಗಿ 'ಮಳಲಿಯಮ್ಮ' ಒಬ್ಬ ಕೊರವಂಜಿಯಾಗಿ ಅದೇ ದಾರಿಯಲ್ಲಿ

ಬರುತ್ತಾಳೆ. ವ್ಯಾಪಾರಿ ಅವಳಲ್ಲಿ ಶಕುನ ಕೇಳಲಾಗಿ ಆಕೆ, ಸಮೀಪದಲ್ಲಿಯೇ ಇದ್ದ ಹುತ್ತವನ್ನು ತೋರಿಸಿ 'ಅದರಲ್ಲಿ ಮಳಲಿಯಮ್ಮ ನೆಲೆಸಿದ್ದಾಳೆ. ಅವಳನ್ನು ಪೂಜಿಸಲು, ಅಲ್ಲಿ ಒಂದು ಗುಡಿ ಕಟ್ಟಿಸು. ನಿನ್ನ ಕಷ್ಟ ಪರಿಹಾರವಾಗುತ್ತದೆಂದು' ಹೇಳಿ ಕಣ್ಮರೆಯಾಗುತ್ತಾಳೆ. ವ್ಯಾಪಾರಿ ಅದೇ ರೀತಿಯಲ್ಲಿ ಹರಕೆ ಹೊರಲಾಗಿ ಅವನ ಎತ್ತುಗಳು ಚೇತರಿಸಿಕೊಳ್ಳುತ್ತವೆ. ಅವನ ವ್ಯಾಪಾರದಿಂದ ಅಪಾರ ಲಾಭವಾಗುತ್ತದೆ. ಆಗ ಆ ವ್ಯಾಪಾರಿಯು ದೇವಿಗೆ ಒಂದಂಕಣದ ಗುಡಿಯೊಂದನ್ನು ಕಟ್ಟಿಸಿಕೊಟ್ಟನೆಂದು ಪ್ರತೀತಿ ಇದೆ. ದೇವಾಲಯದ ಉಳಿದ ಭಾಗವನ್ನು ಕಂದಲಿ ಕಡೆಯವರು ಕಟ್ಟಿದರೆಂಬ ಪ್ರತೀತಿ ಇದೆ. ಅನಂತರದಲ್ಲಿ ಮಾದರಹಳ್ಳಿ ಎಂದಿದ್ದ ಆ ಊರಿನ ಹೆಸರು ಕಾಲಾನಂತರದಲ್ಲಿ ಉಚ್ಚಾರಣೆಯ ಸೌಲಭ್ಯದ ದೃಷ್ಟಿಯಿಂದ 'ಮಳಲಿ' ಎಂಬ ಸಂಕ್ಷಿಪ್ತ ರೂಪ ಪಡೆದುಕೊಳ್ಳುತ್ತದೆ ಎಂಬ ಅಂಶವನ್ನು ಪ್ರೊ. ಮಳಲಿಯವರು ಸ್ಪಷ್ಟಪಡಿಸಿದ್ದಾರೆ. ಮಳಲಿಯಮ್ಮನಿಗೆ 'ಮಳಲಿ ಗಿಡ್ಡಮ್ಮ', 'ಕ್ಯಾಲಮ್ಮ', 'ಲಕ್ಷ್ಮೀದೇವಿ' ಎಂದೂ ಇಲ್ಲಿನ ಜನರು ಕರೆಯುತ್ತಾರೆ. ಒಟ್ಟಿನಲ್ಲಿ ಐತಿಹ್ಯ ಮಾತ್ರ ಬಹಳ ಚೆನ್ನಾಗಿದೆ. ಗಿಡ್ಡಮ್ಮ ಬಂದ ರೀತಿ, ನೆಲೆಸಿದ ಬಗೆ, ದೇವಸ್ಥಾನ ನಿರ್ಮಾಣ ಮಾಡಿದ ಬಗೆ, ದೇವತೆಗೆ ನಡೆಯುವ ಜಾತ್ರೆ, ದೇವಿಯ ಪೂಜೆ, ಬಾಡಿನ ಪ್ರಿಯಳಾದ ಗಿಡ್ಡಿಯನ್ನು ಹೊಲೆಯರು ನೆನೆಯುವ ರೀತಿ, ಗಿಡ್ಡಿಯ ಗಂಡ ನರಸಿಂಹ ನೀನು ಮಾಂಸ ತಿನ್ನುತ್ತೀಯ ಎಂದು ಮುನಿಸಿಕೊಂಡು ಹೋಗಿ ಮಳ್ಳಳ್ಳಿಯಲ್ಲಿ ನೆಲೆಸಿರುವುದು, ಸಾಂಕೇತಿಕವಾಗಿ ಈ ದೇವತೆಯ ಮುಂದೆ ಕಂಬದರಾಯ ಆಗಿ ನಿಂತಿರುವುದು ಮಳಲಿ ಗಿಡ್ಡಿಯನ್ನು ಬೇಲೂರು ಚನ್ನಕೇಶವ ಸೂಳೆಯಾಗಿ ಇಟ್ಟುಕೊಂಡಿದ್ದು, ಇವಳನ್ನು ಕೂಡಲು ಕದ್ದು ಬರುವುದು ಮುಂತಾದ ವಿವರಗಳು ಬಹಳ ಸೊಗಸಾಗಿ ವಿಸ್ತೃತಗೊಂಡಿವೆ.

ಮಳಲಿಯಮ್ಮ ಹಾಸನ ಜಿಲ್ಲೆಯಲ್ಲಿಯೇ ಅಲ್ಲದೆ ಬೇರೆ ಬೇರೆ ಭಾಗಗಳಲ್ಲಿಯೂ ಹೆಸರುವಾಸಿಯಾಗಿದ್ದಾಳೆ. ಕರ್ನಾಟಕದಾದ್ಯಂತ ಹಾಗೂ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಿಂದಲೂ ಭಕ್ತರು ಬರುವುದನ್ನು ಕಾಣಬಹುದು. ಬಹಳ ದೂರದ ಊರುಗಳಿಂದ ದೇವಿಗೆ ಬಂದು ನಡೆದುಕೊಂಡು ಹರಕೆಸಲ್ಲಿಸಿ ಹೋಗುತ್ತಾರೆ. ಕೃತಿಯ ಒಳಗೆ ಇಡೀ ಮಳಲಿ ಗ್ರಾಮದ ಸಾಂಸ್ಕೃತಿಕ, ಸಾಮಾಜಿಕ, ಪರಿಸರದ ವಿಸ್ತೃತ ಪರಿಚಯವಿದೆ. ಇಲ್ಲಿನ ಹಾಡು, ಕಥನ, ಇವುಗಳಲ್ಲಿ ಯಾರೋ ನಾಲ್ಕಾರು ಜನ ಜನಪದ ಗಾಯಕರು

ತಮ್ಮ ವೃತ್ತಿಗಾಗಿ ಹಾಡುವ ಹಾಡಾಗಿರದೆ ಇಲ್ಲಿನ ಪ್ರತಿ ಹಾಡುಗಳು ಮುಗ್ಧ ಮನಸ್ಸುಗಳಲ್ಲಿ ಅರಳಿ ಪ್ರತಿ ಮನೆ-ಮನೆಯಲ್ಲೂ ಹಾಡುವ ಹಾಡಾಗಿವೆ. ಹಾಗಾಗಿ ಈ ಹಾಡುಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವಲ್ಲಿ ಇಡೀ ಪರಿಸರವೇ ಪಾಲ್ಗೊಂಡಿದೆ.

ಮಳಲಿ ಅನ್ನೋದು ಮಾದರಹಳ್ಳಿ ಕಾಣೆ
ಮಳಲಿಯಮ್ಮ ನೆಲೆಸಿದ-ಕಾರಣದಿಂದ
ಮಳಲಿ ಅನ್ನೋದೇ ಗಡಿವಾಸ.

ಇಂತಹ ಮಳಲಿ ಗರಿಗೆದರಿದ ತೆಂಗಿನ ತೋಟಗಳಿಂದಲೂ ಸೊಂಪಗಿ ಬೆಳೆದ ಬಾಳೆ ವನಗಳಿಂದಲೂ ಆವೃತವಾಗಿದೆ.

ಎತ್ತ ನೋಡಿದರು ಎಳೆಯ ತೆಂಗಿನ ತೋಪು
ಸುತ್ತ ನೋಡಿದರೆ ಸುರ ಹೊನ್ನೆ - ಮಳಲಿಯ
ಹೊಕ್ಕು ನೋಡಿದರೆ ಪರಿಮಳ

ಮಳಲಿ ಚೆಂದ ಮಳಲಿ ಬೀದಿ ಚೆಂದ
ಮಳಲಿಯಮ್ಮನ ಗುಡಿ ಚೆಂದ - ಮೇಲಿರುವ
ಶಿಖರವ ಯಾರು ಕಡೆದೋರು ?

ಶಿಖರ ಕಡೆದೋರು ನಾವಲ್ಲ ತಾವಲ್ಲ
ಹಿಂದಲ ಕಾಲದ ಹಿರಿಯೋರು - ನಮ್ಮಜ್ಜದೀರು
ಕರೆಯಮ್ಮೆ ಕೊಟ್ಟು ಕಡಿಸಾರು.

ಹೀಗೆ ಕಡೆಸಿರುವ ದೇವಾಲಯದ ಗರ್ಭಗುಡಿಯಲ್ಲಿ ಗಿಡ್ಡಮ್ಮ ಒಡೆದು ಮೂಡಿದ್ದಾಳೆ. ಮಳಲಿ ಗ್ರಾಮ ತೆಂಗಿನ ತೋಪಿನಿಂದ ಆವೃತವಾದ ಒಂದು ಸುಖ ಸಮೃದ್ಧಿಯ ಹಳ್ಳಿ. ಅತ್ತ ಮಲೆನಾಡಿಗೂ ಇತ್ತ ಬಯಲು ನಾಡಿಗೂ ಎಲ್ಲೆಕಟ್ಟಿನಂತಿರುವ ಈ ಹಳ್ಳಿ ಮಲೆನಾಡಿನ ಮಳೆಯನ್ನೂ ಬಯಲುಸೀಮೆಯ ಬೆಳೆಯನ್ನೂ ತನ್ನಲ್ಲಿ ಮೈಗೂಡಿಸಿಕೊಂಡು ಒಂದು ಕಾಲಕ್ಕೆ ಸುಖಸಮೃದ್ಧಿಯಿಂದ ಕೂಡಿತ್ತು ಎಂಬ ವಿವರಣೆ ಸೂಕ್ತವಾಗಿದೆ.

ಮಳಲಿ ಗಿಡ್ಡಮ್ಮನನ್ನು ಕುರಿತ ಬಿಡಿ ಹಾಡುಗಳನ್ನು ಗಮನಿಸಬಹುದು. ಯಾವುದೇ ಗ್ರಾಮ ದೇವತೆಯ ಜೊತೆ ನಮ್ಮ ಜನಪದರಿಗೆ ಸಲಿಗೆ ಇರುತ್ತದೆ.

ಆತ್ಮೀಯತೆ ಇರುತ್ತದೆ. ಜೊತೆಗೆ ಭಯಭಕ್ತಿಯೂ ಇರುತ್ತದೆ. ಮಳಲಿ ಗಿಡ್ಡಮ್ಮನಿಗೆ ಭಕ್ತರು ನಡೆದುಕೊಳ್ಳುವ ರೀತಿಯಲ್ಲಿಯೂ ಭಯ, ಭಕ್ತಿ, ಶ್ರದ್ಧೆಯನ್ನು ನಿರೂಪಿಸಿದ್ದಾರೆ. ಒಪ್ಪತ್ತಿನ ಊಟ ಉಂಡು ಅಂದರೆ ದೇವರಿಗಾಗಿ ಉಪವಾಸವಿದ್ದು, ಬಾಯಿಬೀಗ ಚುಚ್ಚಿಸಿಕೊಂಡು ಬರುವ ಭಕ್ತರು ಮಳಲಿ ಗಿಡ್ಡಮ್ಮನ ಪೌಳಿಯನ್ನು ಸುತ್ತಿ ಬಂದ ಅನಂತರವೇ ದೇವಿಗೆ ಹರಕೆಯ ಸಮರ್ಪಣೆಯಾಗಬೇಕು. ಹೀಗೆ ಹಲವಾರು ಹರಕೆಗಳ ವೈವಿಧ್ಯತೆಗಳಲ್ಲಿ ಲೇಖಕರು ತುಂಬ ಶ್ರಮವಹಿಸಿ ಗುರುತಿಸಿದ್ದಾರೆ. ಹರಕೆಯಲ್ಲಿ 'ಬಾಳೆಹಣ್ಣು ಬಗೆದು ಬುತ್ತಿಕಟ್ಟಿ ಕಳಿಸಿದ್ದರೆ ; ಇನ್ನು ಕೆಲವರು 'ಹಲಸಿನ ಹಣ್ಣು ಕಲಸಿ ಬುತ್ತಿ ಕಟ್ಟಿದ್ದಾರೆ'. ಮತ್ತೆ ಕೆಲವು ದೊರೆಗಳು 'ಅರಿಶಿಣ – ಶೀಗೇಕಾಯಿ' ಹರಕೆಯನ್ನು ದೇವಿಗೆ ಕಳುಹಿಸಿಕೊಡುವ ವಿವರಗಳಿವೆ.

ಲೇಖಕರೇ ಒಂದೆಡೆ ಗಿಡ್ಡಮ್ಮ ನಮ್ಮೂರ ಬರಿಯ ಆರಾಧ್ಯದೇವತೆಯಾಗಿಲ್ಲ, ಪ್ರತಿಯೊಬ್ಬರ ಮನೆಯಲ್ಲಿ, ಮನೆಯವರಲ್ಲಿ ಒಬ್ಬಳಾಗಿದ್ದಾಳೆ. ಅವರ ಆಚರಣೆಗಳಿಗಿಂತ ದೇವರಲ್ಲಿ ಅವರಿಗಿರುವ ಮುಗ್ಧಭಕ್ತಿ, ಪ್ರೀತಿ, ಆತ್ಮೀಯತೆ, ನಂಬಿಕೆ, ಗೌರವ ಮುಖ್ಯವಾದವು. ನಮ್ಮೂರಿನಲ್ಲಿ ಹುಟ್ಟುವ ಮಕ್ಕಳಿಗೆಲ್ಲ ಅವಳ ಹೆಸರೇ ಇಡಬೇಕು. ನಮ್ಮೂರಿನಲ್ಲಿರುವ ಜನಸಂಖ್ಯೆಯಲ್ಲಿ ನೂರಕ್ಕೆ ಎಂಬತ್ತು ಭಾಗ ಅವಳ ಹೆಸರಿನವರೆ. ಒಬ್ಬೊಬ್ಬರ ಮನೆಯಲ್ಲಿ ತಂದೆ, ತಾಯಿ, ತಾತ, ಅಕ್ಕ, ತಂಗಿಯರೆಲ್ಲ ಅವಳ ಹೆಸರಿನವರೇ ಎಂದು ಮಳಲಿಯವರು ತುಂಬ ಕಳಕಳಿಯಿಂದ ಬರೆಯುತ್ತಾರೆ.

ಇಂದಿಗೂ ಹಾಸನ ಜಿಲ್ಲೆಯ ಹಳ್ಳಿಗಳಲ್ಲಿ ಮುದುಕ–ಮುದುಕಿಯರಿಗೆ ಗಿಡ್ಡಮ್ಮನ ಮಹಿಮೆಗಳನ್ನು ಹೇಳುವುದೆಂದರೆ ಎಲ್ಲಿಲ್ಲದ ಆನಂದ. ಸಂಜೆಯ ಹೊತ್ತು ತಮ್ಮ ಮನೆಯ ಪಡಸಾಲೆಯಲ್ಲೋ ಜಗುಲಿಯ ಮೇಲೋ ಹತ್ತಾರು ಜನರನ್ನು ಕೂರಿಸಿಕೊಂಡು ಬೆರಗಾಗುವಂತೆ ಕಥೆ ಹೇಳುತ್ತಿರುತ್ತಾರೆ ಎಂದು ಲೇಖಕರು ತಿಳಿಸಿದ್ದಾರೆ. ಒಟ್ಟಿನಲ್ಲಿ ಮಳಲಿಯವರು ವಿದ್ಯಾರ್ಥಿಯಾಗಿದ್ದಾಗಲೇ ಹೊರತಂದ ಮೊದಲ ಕೃತಿಯೆಂಬುದೇ ಹೆಗ್ಗಳಿಕೆಯಾಗಿದೆ. ತಮ್ಮ ಊರಿನ ಗ್ರಾಮ ದೇವತೆ ಚಿತ್ರಣವನ್ನು ರಸವತ್ತಾಗಿ ಕಟ್ಟಿಕೊಡುವುದರ ಮೂಲಕ ಜನಪದ ಸಂಸ್ಕೃತಿಯೊಂದರ ಸ್ಮರಣೆಮಾಡಿ, ಹಬ್ಬ–ಹರಿದಿನಗಳು ಹೇಗೆ ಜನಪದರ ಬಾಳಿನಲ್ಲಿ ರಸಸಂಜೆಗಳಾಗಿ, ಅವರ ಬದುಕಿನ ದೀವಿಗೆಗಳಾಗಿ ಸಾಂಸ್ಕೃತಿಕ

ಐಕ್ಯವನ್ನು ಸಾರುತ್ತಿವೆ ಎಂಬುದನ್ನು ತಿಳಿಸಲಾಗಿದೆ. ಇದೆಲ್ಲದರ ಜೊತೆಗೆ ಕೃತಿಯಲ್ಲಿ ಸಾಹಿತ್ಯ ಮತ್ತು ವಾಸ್ತುಶಿಲ್ಪ ಎರಡರ ಮಹತ್ವವೂ ಕೂಡ ದಾಖಲಾಗಿದೆ. ಅಲ್ಲದೆ ಜಾನಪದದ ವಸ್ತು ವಿಶೇಷವಾದ ನಡವಳಿಕೆಗಳು ಇಲ್ಲಿ ದಾಖಲಾಗುತ್ತವೆ. ಮಳಲಿ ಗಿಡ್ಡಮ್ಮನ ಗುಡಿಯನ್ನು ನೋಡಿದಾಗ ಹೊಯ್ಸಳ ಶೈಲಿಯಂತಿದ್ದು, ವಾಸ್ತುಶಿಲ್ಪದ ವೈವಿಧ್ಯತೆಯನ್ನು ಕಾಣಬಹುದು. ಇದರ ಹೆಬ್ಬಾಗಿಲು ಬೇಲೂರು ಚೆನ್ನಕೇಶವ ದೇವಾಲಯದ ಗೋಪುರವನ್ನು ಹೋಲುತ್ತದೆ. ದೇವಾಲಯದ ಒಳಗೆ ಐವತ್ತೆರಡು ಕಂಬಗಳಿವೆ, ಗರ್ಭಗುಡಿ, ಚಿಕ್ಕ ಅಂಕಣ, ದೊಡ್ಡ ಅಂಕಣ, ಕಂಬಗಳಲ್ಲಿರುವ ವಿಗ್ರಹಗಳು, ಅವುಗಳಲ್ಲಿರುವ ಕೆತ್ತನೆಯ ಅಕ್ಷರಗಳು, ದೇವಾಲಯದ ಮೇಲ್ಭಾಗದಲ್ಲಿರುವ ನಾಲ್ಕು ಸಿಂಹಗಳು ಇವೆಲ್ಲ ವಿವರಗಳನ್ನು ನೀಡಿರುವುದು ವಾಸ್ತುಶಿಲ್ಪದ ಅಧ್ಯಯನಕ್ಕೂ ಈ ಕೃತಿ ನಿದರ್ಶನ ಸಾಕ್ಷಿಯಾಗಿದೆ.

ಸಾಹಿತ್ಯಿಕವಾಗಿ ಇಲ್ಲಿ ಭಕ್ತಿಗೀತೆಗಳು, ಕುಲದೇವತಾ ಸ್ತುತಿ, ಗ್ರಾಮದೇವತಾ ವರ್ಣನೆ, ಗಿಡ್ಡಿಯನ್ನು ಹೊಗಳುವ-ತೆಗಳುವ ನಾನಾ ರೂಪದ ಗೀತೆಗಳು ಇಲ್ಲಿದ್ದು, ಈ ಕೃತಿ ಜನಪದ ಕ್ಷೇತ್ರಕ್ಕೆ ಒಂದು ಅಮೂಲ್ಯವಾದ ಕೊಡುಗೆಯಾಗಿದೆ. ಒಟ್ಟಿನಲ್ಲಿ ಮಳಲಿಯವರು ಸಾಂಸ್ಕೃತಿಕ ನೆಲೆಯನ್ನು ಸಮಕಾಲೀನತೆಯನ್ನು ಅರಗಿಸಿಕೊಂಡು ಕೃತಿ ರಚಿಸಿ ಮಹತ್ವಪೂರ್ಣವಾದ, ಜೀವಂತಿಕೆಯುಳ್ಳ ವಿದ್ವಾಂಸರೆನಿಸಿದ್ದಾರೆ.

ಡಾ॥ ಮಳಲಿಯವರ ಮಹತ್ವದ ಕೃತಿಗಳಲ್ಲಿ 'ಕೋಲು ಪದಗಳು' ವಿಶಿಷ್ಟವಾದುದಾಗಿದೆ. ಕೃತಿಯ ಒಳಗಡೆ ಐವತ್ತೆಂಟು ವಿವಿಧ ಬಗೆಯ ಕೋಲು ಪದಗಳಿವೆ. ದೀರ್ಘವಾದ ವಿದ್ವತ್ಪೂರ್ಣವಾದ ಪ್ರಸ್ತಾವನೆಯಿದೆ. ಭಾರತದಲ್ಲಿರುವ ಕೋಲಾಟದ ಬಗೆಗಳು, ಕರ್ನಾಟಕದಲ್ಲಿರುವ ಕೋಲಾಟದ ಬಗೆಗಳು, ಹಾಸನ ಜಿಲ್ಲೆಯಲ್ಲಿರುವ ಕೋಲಾಟದ ಬಗೆಗಳ ಬಗ್ಗೆ ವಿಸ್ತೃತವಾದ ವಿವರಣೆಗಳಿವೆ. ಕೋಲಾಟದ ಆಳುಗಳು, ಕೋಲಾಟಕ್ಕೆ ಬೇಕಾಗಿರುವ ಪರಿಕರಗಳು – ಹೀಗೆ ವಿಭಿನ್ನ ವಿವರಣೆಯನ್ನು ಹೊಂದಿರುವ ಈ ಕೃತಿ ವೈಜ್ಞಾನಿಕವಾಗಿ ಮೂಡಿಬಂದಿದೆ.

'ಕೋಲು ಪದಗಳು' ಕೃತಿಯಲ್ಲಿ ಸಾಹಿತ್ಯಿಕವಾಗಿ ಅತ್ಯಂತ ಶ್ರೇಷ್ಠಗೀತೆಗಳಿವೆ. ಪ್ರೀತಿ, ಪ್ರಣಯ, ಸಂಸಾರ, ಹೆಣ್ಣು ಹಾದಿತಪ್ಪಿ ನಡೆಯುವುದು, ಹೆಣ್ಣಿಗೆ ಬುದ್ಧಿವಾದ ಹೇಳುವುದು, ಗಂಗೆಗೌರಿಯವರ ಜಗಳ, ಗೀಜುಗನ ಹಕ್ಕಿಯನ್ನು ಕುರಿತದ್ದು, ಮಾಗಡಿ ಕೆಂಪೇಗೌಡನ ಸಾಹಸ, ಬೇಲೂರು ಚೆನ್ನಕೇಶವ ಹಾಗೂ ಮಳಲಿ

ಗಿಡ್ಡಮ್ಮನವರ ಅಕ್ರಮ ಸಂಬಂಧಗಳು, ಕೊರವಂಜಿಯರ ನಡತೆ, ವಿಡಂಬನೆ, ಹಾಸ್ಯ, ಗಂಭೀರತೆ ಇನ್ನೂ ಮುಂತಾದ ವಿವರಣೆಗಳಿವೆ. ಒಟ್ಟಿನಲ್ಲಿ ಕೋಲುಪದಗಳನ್ನು ಕುರಿತ ಮಹತ್ವದ ಕೃತಿಗಳಲ್ಲಿ ಇದು ಒಂದಾಗಿದೆ.

ಸ್ವತಃ ಕೋಲಾಟದ ಕಲಾವಿದರಾದ 'ಮಳಲಿ' ಅವರು ಕೋಲಾಟವನ್ನು ಒಂದು ಜನಪದ ಕಲೆಯಾಗಿ ಹೇಗೆ ಗುರುತಿಸಬಹುದು, ಕೋಲಾಟದ ಬಗೆಗಳೆಷ್ಟು ಮತ್ತು ಕೋಲಾಟದಲ್ಲಿ ಕಂಡುಬರುವ ವೈವಿಧ್ಯತೆಯ ಜೊತೆಗೆ ಕೋಲಾಟ ಪದಗಳ ಸಾಹಿತ್ಯಿಕ ವಿಶೇಷತೆಗಳನ್ನು ಸಂಶೋಧನಾತ್ಮಕವಾಗಿ, ಶಾಸ್ತ್ರೀಯವಾಗಿ ಹೊರಗೆಡವಿದ್ದಾರೆ. ಕೋಲಾಟದಲ್ಲಿ ಹಲವಾರು ಪ್ರಭೇದಗಳಿವೆ. ಪ್ರಾದೇಶಿಕವಾಗಿ ಅವು ವ್ಯತ್ಯಾಸಗೊಳ್ಳುತ್ತವೆ. ಮಳಲಿ ಅವರು ಈ ಕೃತಿಯಲ್ಲಿ ಸುತ್ತುಕೋಲು, ಹಾರ್‌ಗಟಕರು, ಮನೆಕೋಲು ಇತ್ಯಾದಿ ಇಪ್ಪತ್ತು ಪ್ರಭೇದಗಳನ್ನು ತಿಳಿಸುತ್ತಾ 'ಜಡೆಕೋಲಾಟ' ಪ್ರಭೇದದ ಬಗ್ಗೆ ವಿಸ್ತಾರವಾಗಿ ಬರೆಯುತ್ತಾರೆ.

'ಜಡೆಕೋಲು' ಎಂಬುದು ಕೋಲಾಟದಲ್ಲಿ ಒಂದು ವಿಶಿಷ್ಟ ಬಗೆ. ಆಟದ ಪ್ರಾರಂಭಕ್ಕೆ ಮೊದಲು ಹಗ್ಗಗಳಿಂದ ಜಡೆಯ ದಿಂಡನ್ನು ಹೆಣೆದು ಒಟ್ಟುಗೂಡಿಸಿ ಅವುಗಳಿಂದ ತುದಿಯ ಜಡೆ ಅಥವಾ ಹಗ್ಗವನ್ನು ಬಿಡಿಯಾಗಿಯೇ ಬಿಡುತ್ತಾರೆ. ಈ ಬಿಡಿ ಹಗ್ಗಗಳನ್ನೆಲ್ಲ ಸೇರಿಸಿದ ಎರಡು ಜಡೆಯನ್ನು ಯಾವುದಾದರೊಂದು ಉಪಕರಣಕ್ಕೆ ಕಟ್ಟುತ್ತಾರೆ. ಉಳಿದ ಬಿಡಿ ಹಗ್ಗಗಳನ್ನು ಕಲಾವಿದರು ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ಕೋಲು ಹುಯ್ಯುವಾಗ ಬಿಡಿ ಹಗ್ಗಗಳೆಲ್ಲ ಸೇರಿಕೊಂಡು ಜಡೆಯ ಆಕಾರಕ್ಕೆ ತಿರುಗುವುದು. ಈ ಕಾರಣಕ್ಕಾಗಿಯೇ ಇದಕ್ಕೆ ಜಡೆಕೋಲಾಟ ಎಂಬ ಹೆಸರು ಬಂದಿರುವುದು ಎಂಬುದಾಗಿ ಮಳಲಿಯವರು ಪಾಂಡಿತ್ಯಪೂರ್ಣವಾದ ಬರವಣಿಗೆಯಲ್ಲಿ, ಸರಳವಾಗಿ, ಅರ್ಥಪೂರ್ಣವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಗ್ರಂಥದಲ್ಲಿ ಒಟ್ಟು ಐವತ್ತೆರಡು ಪದಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಅದರಲ್ಲಿ 'ಚುಕ್ಕಿ ಉಂಗುರಕೆ ನಾರಿ ಮನ ಸೋತಳೋ' ಎಂಬ ಸಾಲು ಎಂತಹವರ ಮನಸ್ಸನ್ನೂ ಸೂರೆಗೊಳ್ಳದೇ ಇರಲಾರದು. ಒಬ್ಬ ಸಾಮಾನ್ಯ ಮುಗ್ಧ ಹೆಣ್ಣು ಮಗಳ ಕ್ಷಣಿಕ ಆಸೆಯ ದುರಂತತೆ ; ಅವಳ ಬಂಗಾರದಂತಹ ಬದುಕು ನುಚ್ಚು ನೂರಾದುದರ ಸಂಗತಿ ಗೀತೆಯ ವಸ್ತುವಾಗಿದೆ. ಕೋಲಾಟದಲ್ಲಿ ಬರುವ ಹಾಡು, ಹಾಡಿಗೆ ತಕ್ಕ ಕುಣಿತ, ಕುಣಿತಕ್ಕೆ ತಕ್ಕ ಕೋಲುಗಳ

ಸಪ್ಪಳಿಂದಾಗಿಯೇ ಕೋಲಾಟ ಉತ್ಕೃಷ್ಟ ಕಲೆಯಾಗಿದೆ. ಕೋಲುಪದಗಳ ರಚನೆಯ ಹಿನ್ನೆಲೆಯಲ್ಲಿ ಭಾವಗೀತಾತ್ಮಕ ಮತ್ತು ಕಥಾನಾತ್ಮಕಗಳೆಂದು ವಿಭಾಗಿಸಿದ್ದಾರೆ. ಈ ಹಾಡುಗಳಲ್ಲಿ ಸಾಹಿತ್ಯಿಕ ಮೌಲ್ಯಗಳಿರುವುದನ್ನು ತಿಳಿಸುತ್ತಾರೆ.

ಡಾ॥ ಎಂ. ಚಿದಾನಂದಮೂರ್ತಿಯವರು 'ಪ್ರಜಾವಾಣಿ' ಪುಸ್ತಕ ವಿಮರ್ಶೆಯಲ್ಲಿ 'ಕೋಲುಪದಗಳು' ಕೃತಿ ಕುರಿತು ಹೀಗೆ ಹೇಳಿದ್ದಾರೆ. 'ಕೋಲಾಟದ ನಿಕಟ ಪರಿಚಯವಿರುವ ಮತ್ತು ಸ್ವತಃ ಕೋಲಾಟದಲ್ಲಿ ಅನುಭವವಿರುವ ಶ್ರೀ ವಸಂತಕುಮಾರ್ ಅವರು ಐವತ್ತೆಂಟು ಕೋಲಾಟದ ಪದಗಳನ್ನು ಇಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಕೋಲಾಟವನ್ನು ಪ್ರಪ್ರಥಮವಾಗಿ, ಶಾಸ್ತ್ರೀಯವಾಗಿ ಅಭ್ಯಸಿಸಿರುವ ಅವರ ಈ ಪ್ರಯತ್ನ ನಿಜವಾಗಿಯೂ ಅಭಿನಂದನಾರ್ಹವಾದುದು. ಪ್ರಸ್ತಾವನೆ ವಿಷಯಪೂರ್ಣವಾಗಿದೆ. ಕೋಲು ಗೆಜ್ಜೆ ಇವುಗಳ ವಿವರಗಳಿಂದ ಹಿಡಿದು, ಬೇರೆ ಬೇರೆ ರೀತಿಯ ಕೋಲಾಟಗಳವರೆಗೆ ಸಾಕಷ್ಟು ಮಾಹಿತಿಯನ್ನು ಒದಗಿಸಿದ್ದಾರೆ. ಹೇಳಿರುವ ಕ್ರಮ ಶಾಸ್ತ್ರೀಯವಾಗಿದೆ' ಎಂದಿದ್ದಾರೆ.

ಮುಂದುವರಿದು ಡಾ॥ ಎಂ. ಚಿದಾನಂದಮೂರ್ತಿ ಅವರೇ ಪ್ರಬುದ್ಧ ಕರ್ನಾಟಕ : ಸಂ. 36, ಸಂಚಿಕೆ 3) ದಲ್ಲಿ ಹೀಗೆ ಹೇಳುತ್ತಾರೆ.) 'ಶ್ರೀ ಎಂ. ಸಿ. ವಸಂತಕುಮಾರರು ಪ್ರಕಟಿಸಿರುವ 'ಕೋಲುಪದಗಳು' ಸಂಕಲನದಲ್ಲಿ ಒಂದು ಕೋಲುಪದ ನನ್ನನ್ನು ಬಹುವಾಗಿ ಆಕ್ರಮಿಸಿದೆ. ಆ ಪದವನ್ನು ಮತ್ತೆ ಮತ್ತೆ ಓದಿದ್ದೇನೆ. ಓದಿದಷ್ಟೂ ಮತ್ತೆ ಓದುವ ಆಸೆಯನ್ನು ಹುಟ್ಟಿಸುವಷ್ಟು ಆಕರ್ಷಕವಾಗಿದೆ. ನನ್ನಲ್ಲಿ ತಲ್ಲಣ, ಮರುಕ, ಅನುಕಂಪ, ಭಯ, ಉದ್ವೇಗಗಳನ್ನು ಉಂಟುಮಾಡಿ ನನ್ನ ಹೃದಯವನ್ನು ಕದಡಿದೆ. ಒಂದು ಬಗೆಯ ಸುಖದ ಅಚ್ಚುಕಟ್ಟಿರುವ ನೋವಿನ ಅಥವಾ ವಿಷಾದದ ಸ್ಥಿತಿಗೆ ನನ್ನನ್ನು ಮುಟ್ಟಿಸಿ ಜೀವನದ ಜಟಿಲತೆಯನ್ನು ಕುರಿತು ಆಲೋಚಿಸುವಂತೆ ಮಾಡಿದೆ.

'ಚುಕ್ಕಿ ಉಂಗುರಕೆ ನಾರಿ ಮನಸೋತಳೊ' ಎಂಬ ಹೆಸರಿನ ಈ ಕಥನ ಗೀತದ ವಸ್ತು ಒಬ್ಬ ಸಾಮಾನ್ಯ ಮುಗ್ಧ ಹೆಣ್ಣುಮಗಳು ; ಅವಳ ಕ್ಷಣಿಕ ಆಸೆಯ ದುರಂತತೆ ; ಅವಳ ಬಂಗಾರದಂತಹ ಬದುಕು ನುಚ್ಚು ನೂರಾದದ್ದು....'

ಈ ಗೀತೆಯಲ್ಲಿ ಒಂದು ಮಾತೂ ವ್ಯರ್ಥವಾಗಿಲ್ಲ. ಯಾವುದೂ ವಾಚ್ಯವಲ್ಲ. ಅತ್ಯಂತ ಧ್ವನಿಪೂರ್ಣರೀತಿಯಲ್ಲಿ ನಿರೂಪಿತನಾಗಿರುವ ಈ ಕಥನ ಗೀತದ ಮಾತಿನ ಸಂಯಮ ಬಹಳ ಮೆಚ್ಚಬೇಕಾದ್ದು.

ಒಟ್ಟು ನಲವತ್ತೊಂದು ಸಾಲಿನ ಅಚ್ಚಿನ ಒಂದೂವರೆ ಪುಟವನ್ನು

ತುಂಬಿರುವ ಈ ಪುಟ್ಟ ಕಥನ ಗೀತೆ ಹೆಣ್ಣಿನ ಬಾಳಿನಲ್ಲಿ ಬೀಸಿದ ಬಿರುಗಾಳಿಯನ್ನೇ ಹಿಡಿದಿಟ್ಟಿದೆ. ಇಲ್ಲಿಯ ಒಂದೊಂದು ಸಾಲೂ ಒಂದೊಂದು ಪದವೂ ಗಮನಾರ್ಹ ಮತ್ತು ಸಾರ್ಥಕ ಎನ್ನುತ್ತಾರೆ. ಒಟ್ಟಿನಲ್ಲಿ ಈ ಕೃತಿ ಸಂಶೋಧನೆ, ವಿಶ್ಲೇಷಣೆ, ವಿಸ್ತಾರ, ವೈವಿಧ್ಯದಿಂದ ಕೂಡಿದ ಗಮನಾರ್ಹ ಕೃತಿಯಾಗಿದೆ.

ಜಾನಪದ ಕ್ಷೇತ್ರಕ್ಕೆ ಮಳಲಿಯವರ ಮಹತ್ವದ ಕೊಡುಗೆಗಳಲ್ಲಿ 'ಕರ್ನಾಟಕ ಜನಪದ ವೈದ್ಯ' ಕೃತಿ ಶ್ರೇಷ್ಠದ್ದಾಗಿದೆ. ಕೃತಿ ಬಂದ ಸಂದರ್ಭದಲ್ಲಿ ಇದು ಕನ್ನಡ ಜನಪದ ಕ್ಷೇತ್ರದಲ್ಲಿ ಮಹತ್ವದ ಕೃತಿಯಾಗಿ ಹೆಸರುವಾಸಿಯಾಗಿತ್ತು. ವೈದ್ಯ ಪದ್ಧತಿ ಒಂದು ಕಾಲಕ್ಕೆ ಸಂಪ್ರದಾಯವಾಗಿತ್ತು ಇಂದು ವೈಜ್ಞಾನಿಕವೂ ಹೌದು ಎಂಬುದು ನಮ್ಮವರಿಗೆ ಮನವರಿಕೆಯಾಗಿದೆ. ಇದರ ಉಪಯೋಗ ಪಡೆಯುವ ಜೊತೆ ಜೊತೆಯಲ್ಲಿಯೇ ವೈಜ್ಞಾನಿಕ ಅಧ್ಯಯನವೂ ಕೂಡ ಆರಂಭವಾಯಿತು. ಇದೇ ಆಯುರ್ವೇದ ಪದ್ಧತಿಯಾಗಿ, ಹೊಸರೂಪ ಪಡೆದಿರುವುದನ್ನು ಕಾಣಬಹುದು. ಇಂದು ಭಾರತದಲ್ಲಿ ಮಾತ್ರವಲ್ಲದೆ, ವಿದೇಶಗಳಲ್ಲಿಯೂ ಅಧ್ಯಯನದ ವಸ್ತುವಾಗಿದೆ. ಮಹತ್ವದ ಗಿಡಮೂಲಿಕೆ ಔಷಧಿಗಳು ಹಾಗೂ ಅವುಗಳ ಬಳಕೆಯನ್ನು ನಮ್ಮ ಜನಪದರಿಂದ ಸಂಗ್ರಹಿಸಿ ಮಳಲಿಯವರು ಪ್ರಕಟಿಸಿ ಒಂದು ಮಹತ್ವದ ಸಾಧನೆಯನ್ನು ಮಾಡಿದ್ದಾರೆ.

ಜನಪದ ವೈದ್ಯವನ್ನು ಗ್ರಾಮೀಣ ಜನರ ವಿಜ್ಞಾನವೆಂದೇ ಕರೆಯಬಹುದು. ಹಳ್ಳಿಔಷಧಿ, ಹಸಿಔಷಧಿ, ನಾಟಿಮದ್ದು, ಹಿತ್ತಲಮದ್ದು, ಮನೆಮದ್ದು, ಕೈ ಔಷಧಿ ಮುಂತಾದ ಹೆಸರುಗಳಿಂದ ಗ್ರಾಮೀಣ ವಲಯಗಳಲ್ಲಿ ಪರಿಚಿತವಾಗಿದೆ. ಜನಪದ ವೈದ್ಯ ತಲೆಮಾರುಗಳ ಕೊಡುಗೆಯೇ ಆಗಿದೆ. ಡಾ॥ ಮಳಲಿ ಅವರ ಈ ಕೃತಿಯಲ್ಲಿ ಎರಡು ವಿಧದ 'ಜನಪದ ವೈದ್ಯ' ಪದ್ಧತಿಗಳ ಸಂಗ್ರಹವಾಗಿದೆ. ಮೊದಲಿಗೆ ಮನುಷ್ಯ ಸಂಬಂಧಿತವಾದ ರೋಗರುಜಿನಗಳಿಗೆ 'ಮದ್ದುಮಾಡುವ' ಬಗೆಯನ್ನೂ ಎರಡನೆಯ ಭಾಗದಲ್ಲಿ ಪಶುಸಂಕುಲಕ್ಕೆ ಬರುವ ರೋಗರಜಿನಗಳಿಗೆ ಚಿಕಿತ್ಸೆ ನಡೆಸುವ ಪದ್ಧತಿಯನ್ನೂ ಒಳಗೊಂಡಿದೆ. ಮಲೆನಾಡು ಮತ್ತು ಬಯಲುಸೀಮೆಯ (ದಕ್ಷಿಣ ಕರ್ನಾಟಕ) ಪ್ರದೇಶಗಳಲ್ಲಿ ಅನುಸರಿಸುತ್ತಿರುವ 'ಮದ್ದಿನ ಬಳಕೆ'ಯನ್ನು ಕುರಿತ ಸಂಗ್ರಹ ಇದಾಗಿದ್ದರೂ ಚಿಕಿತ್ಸೆಗಳೂ ಆ ಪ್ರದೇಶಗಳಿಗೇ ಸೀಮಿತವಾದುವೆಂದೇನೂ ಅಲ್ಲ. ಅಂದರೆ ಅಂತಸ್ಸತ್ವ ಮಾತ್ರ ರೋಗನಿವಾರಕವೇ ಆಗಿದೆ.

ಮಾನವರಿಗೆ ಬರುವ ರೋಗ, ಕಾಯಿಲೆ ಕಸಾಲೆ, ಮೈಮೇಲೆ ಆಗುವ

ಗಾಯ ಇತ್ಯಾದಿಗಳಿಗೆ ಪ್ರಕೃತಿದತ್ತವಾಗಿ ಮಾಡಬಹುದಾದ ಚಿಕಿತ್ಸೆಗಳನ್ನು ವಿವರವಾಗಿ ಮೊದಲ ಭಾಗದಲ್ಲಿ ಸಂಗ್ರಹಿಸಿದ್ದಾರೆ. ಪ್ರತಿಯೊಂದು ಕಾಯಿಲೆ ಹಾಗೂ ಅದಕ್ಕೆ ಪರಿಹಾರವಾಗಿ ನಡೆಸುವ ಔಷಧಿಗಳ ಬಳಕೆಯನ್ನು ಸಂಗ್ರಹಕಾರರು ಸಾಕಷ್ಟು ವಿವರಾತ್ಮಕವಾಗೇ ಸಂಗ್ರಹಿಸಿದ್ದಾರೆ. ಒಂದು ರೋಗ ಅಥವಾ ಶರೀರ ಗಾಯ ಆದಾಗ, ಅದರ ಚಿಕಿತ್ಸೆಗೆ ನೀಡುವ 'ಮದ್ದು', 'ಮದ್ದು ತಯಾರಿಸಲು ಬಳಸುವ ಸಸ್ಯ', 'ಮರ', 'ಬಳ್ಳಿ', 'ಬೇರುಗಳ ವಿವರ', 'ಮಿಶ್ರಣದ ಪ್ರಮಾಣ', 'ಮಿಶ್ರಣ ಮಾಡುವ ವಸ್ತುಗಳು, ಅನಂತರ 'ಮದ್ದನ್ನು' ತಯಾರಿಸುವ ವಿಧಾನ ' ಹಾಗೆಯೇ ಅದನ್ನು ಬಳಸುವ ವಿಧಾನ. ಈ ಎಲ್ಲದರ ಮಾಹಿತಿಗಳನ್ನು ವಿವರವಾಗಿಯೇ ಸಂಗ್ರಹಿಸಿದ್ದಾರೆ. ವಿವರಣೆಗಳನ್ನು ತುಂಬ ವ್ಯವಸ್ಥಿತವಾಗಿ ಕಟ್ಟಿಕೊಟ್ಟಿದ್ದಾರೆ.

ಮನುಷ್ಯರಿಗೆ ನೀಡುವ 'ಮದ್ದು'ಗಳಲ್ಲಿ ಎರಡು ಬಗೆ ಇರುವುದನ್ನು ನಾವು ಗುರುತಿಸಬಹುದು. 1). ದೇಹದ ಒಳಕ್ಕೆ ತೆಗೆದುಕೊಳ್ಳುವ ಮದ್ದು 2) ದೇಹದ ಮೇಲೆ ಲೇಪಿಸುವ ಮದ್ದು – ಇದನ್ನು ಕುರಿತು ನಮ್ಮ ಜನಪದರು ವಿವೇಚನೆಯಿಂದ 'ಮದ್ದು' ಕಂಡುಹಿಡಿದಿದ್ದಾರೆ. ಉದಾಹರಣೆಗೆ ಕಳ್ಳಿ, ಎಕ್ಕದಂಥ, ಔಷಧಿಯುಕ್ತ ಗಿಡಗಳನ್ನು ಬಳಸುವುದು ದೇಹದ ಮೇಲ್ಭಾಗದಲ್ಲಾದ ಗಾಯಗಳಿಗೇ ಹೊರತು ಸೇವಿಸುವುದಕ್ಕಲ್ಲ. ಏಕೆಂದರೆ ಅವು ದೇಹದ ಒಳಗೆ ಹೋದರೆ ಅಪಾಯಕಾರಿಯಾಗುತ್ತವೆ. ಈ ರೀತಿ ಜನಪದರು ನಿರ್ಣಯಕ್ಕೆ ಬರಲು ಅವರು ನಡೆಸಿರುವ ಪ್ರಯೋಗಾನುಭವಗಳೇ ಕಾರಣ ಎಂದೇ ಹೇಳಬಹುದು. ಪಶು ಸಂಬಂಧಿಯಾದ ರೋಗಗಳಿಗೆ ಚಿಕಿತ್ಸೆ ನೀಡುವಾಗ ಜನಪದರ ನೆರವಿಗೆ ಬಂದಿರುವುದು ಅವರ ಬೇಸಾಯ ಸಂಬಂಧಿಯಾದ ಅನುಭವಗಳೇ ಪ್ರಾಮಾಣ್ಯ. ಪಶುಗಳಿಗೆ ತಗಲುವ ದೊಡ್ಡ ರೋಗ, ಚಪ್ಪೆರೋಗ, ನಾಲಗೆ ಸೆಳೆತ ಮೊದಲಾದ ರೋಗಗಳಿಗೆ ಅನೇಕ ಬಗೆಯ ಚಿಕಿತ್ಸೆಗಳನ್ನು ಮಾಡುವುದು ; ಹಲವಾರು 'ಮದ್ದಿನ' ವಿಧಾನಗಳನ್ನು ಸಂಗ್ರಹಿಸಿದ್ದಾರೆ. ಅದೇ ರೀತಿ 'ಟಿಪ್ಪಣಿಗಳು' ಎಂಬ ಭಾಗದಲ್ಲಿ ಔಷಧೀಯ ಸಂಬಂಧವಾದ ಕೆಲವು ಮಾಹಿತಿಗಳಿವೆ. ಔಷಧಿ ಗಿಡಗಳ ವಿವರಗಳ ಜೊತೆಗೆ, ಔಷಧಿ ತಯಾರಿಸುವ ವಿಧಾನ ಇತ್ಯಾದಿ ವಿವರಗಳನ್ನು ತುಂಬಾ ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಶಿಸಿದ್ದಾರೆ.

ಪ್ರಸ್ತಾವನೆಯಲ್ಲಿ ಡಾ॥ ಮಳಲಿಯವರು 'ಜನಪದ ವೈದ್ಯ' ಇಡಿಯಾಗಿ

ವಿಜ್ಞಾನದ ತಳಹದಿಯ ಮೇಲೆ ನಿಂತಿದೆಯೋ ? ಅದರಲ್ಲಿರುವ ನಂಬಿಕೆ ಏನು ? ಮೂಢನಂಬಿಕೆ ಏನು ? ಎಷ್ಟು 'ಮದ್ದು' ಪ್ರಯೋಗದಿಂದ ಆವಿಷ್ಕಾರಗೊಂಡದ್ದು ? ಆ ಕುರಿತು ವಿವೇಚನೆ ಏನಿರಬೇಕು ? ಆಯುರ್ವೇದ, ಯುನಾನಿಗೂ ಜನಪದ ವೈದ್ಯಕ್ಕೂ ಇರುವ ಸಂಬಂಧ ಎಂಥದು ? ಇತ್ಯಾದಿ ಸಂಗತಿಗಳನ್ನು ವಿವೇಚಿಸಿದ್ದಾರೆ. ಅಲ್ಲದೆ ಜನಪದ ವೈದ್ಯದ ಸಾಧಕ-ಬಾಧಕಗಳ ಬಗ್ಗೆಯೂ ವೈಜ್ಞಾನಿಕವಾಗಿ ವಿವೇಚನೆ ನಡೆಸಿದ್ದಾರೆ.

ಜನಪದದ ಈ ಪ್ರಕಾರದಲ್ಲಿ 'ಕರ್ನಾಟಕ ಜನಪದ ವೈದ್ಯ' ಗ್ರಂಥ ಮೊದಲ ಪ್ರಯತ್ನ ಎಂದೇ ಹೇಳಬಹುದು. ಕೃತಿ ಕೂಡ ಗುಣಮಟ್ಟದಿಂದ ಕೂಡಿದೆ. ಡಾ॥ ಪಿ. ಕೆ. ರಾಜಶೇಖರ ಅವರು ಈ ಕೃತಿಯನ್ನು ಕುರಿತು ಈ ರೀತಿ ಅಭಿಪ್ರಾಯಪಡುತ್ತಾರೆ : 'ಸಂಪ್ರದಾಯ ವಿಜ್ಞಾನವನ್ನು ಕುರಿತಂಥ ಕೃತಿಗಳಿಗೆ ಕರ್ನಾಟಕ ಜನಪದ ವೈದ್ಯ ಬೆಳ್ಳಿಚುಕ್ಕೆಯಂತೆ ಕಾಣಿಸಿಕೊಂಡಿದೆ. ಜನಶ್ರುತಿಯಲ್ಲಿ ಉಸಿರಾಡುತ್ತಿದ್ದ ವೈದ್ಯಕೀಯ ವಿಚಾರಗಳನ್ನು ಸುಸಂಬದ್ಧವಾಗಿ, ಶಾಸ್ತ್ರೀಯವಾಗಿ ಒದಗಿಸಿರುವ ಈ ಕೃತಿ ಶಾಸ್ತ್ರೀಯ ಗ್ರಂಥಗಳ ಪ್ರಕಟಣೆಗೆ ಒಂದು ಆದರ್ಶಪ್ರಾಯ ಮಾದರಿಯಾಗಿದೆ. ವಿದ್ವತ್‌ಪೂರ್ಣ ಮುನ್ನುಡಿಯು ಕೃತಿಯ ಮೌಲ್ಯಗಳನ್ನು ಹೆಚ್ಚಿಸಿದೆ. ಒಟ್ಟಿನಲ್ಲಿ ಈ ಕೃತಿ 'ಅನುಭವ ಮತ್ತು ಪರಿಶ್ರಮದಿಂದ ರಚಿತವಾದ ಶ್ರೇಷ್ಠ ಕೃತಿಯಾಗಿದೆ. 1979ರ ಹೊತ್ತಿನಲ್ಲೇ ಪ್ರಕಟವಾದ ಈ ಕೃತಿ ನಮ್ಮ ಗ್ರಾಮೀಣ ವೈದ್ಯ ಪದ್ಧತಿಗೆ ಒಂದು ದಿಕ್ಸೂಚಿಯಾಗಿ ಮೂಡಿ ಬಂದ ಕೃತಿಯಾಗಿದೆ.

ಡಾ॥ ಮಳಲಿಯವರ ಮತ್ತೊಂದು ಕೃತಿ 'ಜನಪದ ನಂಬಿಕೆಗಳು'. ಈ ಕೃತಿಯನ್ನು ಪ್ರೊ. ರಾಗೌ ಅವರೊಂದಿಗೆ ಸಂಗ್ರಹಿಸಿ ಪ್ರಕಟಿಸಿದ್ದಾರೆ. ನಂಬಿಕೆಗಳು ಮನುಷ್ಯನ ಬದುಕಿಗೆ ಅವಶ್ಯ ಎನ್ನುವಷ್ಟರ ಮಟ್ಟಿಗೆ ಗ್ರಾಮೀಣರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. 'ನಂಬಿಕೆಯೇ ಜೀವನ, ಅಪನಂಬಿಕೆಯೇ ಮೃತ್ಯು' ಎಂಬಂತೆ ಜನಪದರಲ್ಲಿ ಬೆರೆತಿವೆ. ಈ ಕೃತಿಯಲ್ಲಿ ನಂಬಿಕೆಗಳ ಒಳಿತುಗಳು, ನಂಬಿಕೆಗಳ ವೈಜ್ಞಾನಿಕತೆ ಈ ಎಲ್ಲದರ ವಿವರಣೆಗಳಿವೆ. ಈ ಕೃತಿ ಜನಪದ ಸಾಹಿತ್ಯೇತರ ಗುಂಪಿಗೆ ಸೇರಿದ್ದರೂ ಕರ್ನಾಟಕ ಜಾನಪದ ಕ್ಷೇತ್ರಕ್ಕೆ ಒಂದು ಹೊಸ ಕಾಣಿಕೆಯಾಗಿದೆ. ಗ್ರಾಮೀಣ ಬದುಕಿನ ಜೀವನವನ್ನು ಮನಃಶಾಸ್ತ್ರೀಯವಾಗಿ ಅಧ್ಯಯನ ಮಾಡುವುದಕ್ಕೆ ಹೊಸ ಆಕರವಾಗಿದೆ. ಕೃತಿಯಲ್ಲಿ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿರುವ ನಂಬಿಕೆಗಳಿವೆ. ಪ್ರಾದೇಶಿಕ ವೈವಿಧ್ಯತೆಯೂ ಕೂಡ ಇಲ್ಲಿ ಇವೆ.

ಇದು ಕೇವಲ ಸಂಗ್ರಹವಷ್ಟೇ ಆಗಿರದೆ, ದೀರ್ಘವಾದ, ವಿದ್ವತ್ಪೂರ್ಣ ಪ್ರಸ್ತಾವನೆಯನ್ನು ಹೊಂದಿದೆ. ನಂಬಿಕೆಗಳ ಸ್ವರೂಪಗಳು, ಲಕ್ಷಣಗಳು, ಸೂಕ್ತವಾದ ವಿಭಜನೆ ಮತ್ತು ನಂಬಿಕೆಗಳ ಗುಣದೋಷಗಳನ್ನು ಸಾಕಷ್ಟು ಚರ್ಚೆಗೆ ಒಳಗುಮಾಡಿ ವಿಶ್ಲೇಷಣಾತ್ಮಕ ಅಧ್ಯಯನವನ್ನು ನಡೆಸಿದ್ದಾರೆ. ಈ ಕೃತಿ ಜಾನಪದ ಅಧ್ಯಯನ ಕ್ಷೇತ್ರಕ್ಕೆ ಕೊಟ್ಟ ಒಂದು ಹೊಸ ಪರಿಚಯವೆಂದೇ ಹೇಳಬೇಕು.

ಡಾ॥ ಮಳಲಿ ಅವರು ಪ್ರಥಮತಃ ಒಬ್ಬ ಸೃಜನಶೀಲ ಲೇಖಕರು. ಒಳ್ಳೆಯ ವಿಮರ್ಶಕರು. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿರುವ ಅವರು ಕನ್ನಡ ನಾಡು ಕಂಡ ಅತ್ಯುತ್ತಮ ಕವಿಗಳಲ್ಲಿ ಒಬ್ಬರು. ಅವರ 'ಕಡಲ ಕವಿತೆಗಳು', 'ಹೃದಯಗಂಗೆ', 'ಕರಾವು' ಕವನ ಸಂಕಲನಗಳು. ಇವುಗಳು ಅವರೊಬ್ಬ ಸಮರ್ಥ ಕವಿ ಎಂಬುದನ್ನು ಬಹುಬೇಗ ಸಾಹಿತ್ಯಕ್ಷೇತ್ರದಲ್ಲಿ ನಿರೂಪಿಸಿದವು. ತಮ್ಮ ಆಳವಾದ ಬದುಕಿನ ಅನುಭವದಿಂದ ತೀವ್ರಗೊಂಡ ಭಾವನೆಗಳನ್ನು ಅಷ್ಟೇ ವಿಶಿಷ್ಟವೆನಿಸಿದ ಪ್ರಕೃತಿ ಸೌಂದರ್ಯದ ಸೊಬಗನ್ನು ಮೈಗೂಡಿಸಿಕೊಂಡು ಸಹೃದಯರ ಹೃದಯಕ್ಕೆ ಅವು ಲಗ್ಗೆಹಾಕಿವೆ.

'ಹೃದಯಗಂಗೆ' ಡಾ॥ ಮಳಲಿ ಅವರ ಚೊಚ್ಚಲ ಕವನ ಸಂಕಲನ. 1968 ಫೆಬ್ರವರಿಯಲ್ಲಿ ಪ್ರಕಟಗೊಂಡ ಈ ಕವನ ಸಂಕಲನಕ್ಕೆ ಮೈಸೂರು ರಾಜ್ಯದ ಮಾಜಿ ವಿದ್ಯಾ ಮಂತ್ರಿಗಳಾಗಿದ್ದ ದಿ॥ ಎ. ಜಿ. ರಾಮಚಂದ್ರರಾಯರು ಹಾರೈಕೆಯ ನುಡಿಗಳನ್ನು ಬರೆದಿದ್ದಾರೆ. ಇಲ್ಲಿನ ಹೆಚ್ಚಿನ ಕವನಗಳು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ರಚನೆಗೊಂಡವುಗಳಾಗಿವೆ. ಸಹಜವಾಗಿಯೇ ತಾರುಣ್ಯ ಸಹಜವಾದ ಆದರ್ಶಗಳ ಕನಸು, ಪ್ರೀತಿ, ಪ್ರೇಮದ ತುಡಿತ ಇಲ್ಲಿಯ ಕವನಗಳಲ್ಲಿ ಕಂಡುಬರುತ್ತದೆ. ಮಹಾತ್ಮಗಾಂಧಿ, ಏಸುಕ್ರಿಸ್ತರ ಬಗೆಗೆ ವ್ಯಕ್ತಿಚಿತ್ರಗಳನ್ನು ತುಂಬಾ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. 'ಶ್ರೀ ಕುವೆಂಪು' ಎಂಬ ಕವನ ಕವಿಗೆ ಅವರ ಕುರಿತಾದ ಶ್ರದ್ಧಾಭಕ್ತಿಯನ್ನು ಅನಾವರಣಗೊಳಿಸುತ್ತದೆ.

ಮಲೆನಾಡಿನಲಿ ಜನಿಸಿ
ಮೈಸೂರ ಮೊಗ್ಗೆನಿಸಿ
ಭಾರತದ ಹೂವಾಗಿ ಅರಳಿನಿಂದೆ

ಎಸಳೆಸಳು ಸೊಂಪಾ
ಪರಿಮಳದಿ ಪೆಂಪಾದೆ

ಕನ್ನಡಿಗರೊಲವಿನಲಿ ಆರಾಧ್ಯಮೂರ್ತಿಯಾದೆ

ಎಂದು ಸಾಗುವ ಈ ಭಾವಗೀತೆಯಲ್ಲಿ ಕವಿ ಕುವೆಂಪು ಅವರನ್ನು 'ಈ ಯುಗದ ವಾಲ್ಮೀಕಿ' ಎಂದು ಕರೆದಿರುವುದು ಒಂದು ಸಾರ್ಥಕ ಉಪಮೆ. 'ನವೋದಯ ಸ್ಪಂದ' ಅವರ ಕವಿತೆಗಳಲ್ಲಿ ಆದ್ಯಂತವಾಗಿ ಕಂಡುಬರುತ್ತದೆ. ಸೂರ್ಯೋದಯದ ಕುರಿತಾದ ಅವರ ಕವಿತೆಗಳಲ್ಲಿ ಸಂಗೀತ–ಸಾಹಿತ್ಯಗಳ ಸುಮಧುರ ಸಮ್ಮಿಲನವಿದೆ. ಉದಾಹರಣೆ ಈ ಪಂಕ್ತಿಗಳನ್ನು ನೋಡಬಹುದು:

ಹೊಳೆಯುತಿದೆ ದಿಕ್ಕಿನಲಿ ಬೆಳೆಯುತಿದೆ ಮೂಡಲಲಿ
ಮೆರೆಯುತಿದೆ ನಾಡಿನಲಿ ನೋಡು ಬಾ
ಗಿರಿಯ ಮರೆಯಲ್ಲಿ ಗಗನದಡಿಯಲ್ಲಿ
ರವಿಯು ಮೂಡತಿಹನು ನೋಡು ಬಾ

ಹೀಗೆ ಕಾವ್ಯಾನುಸಂಧಾನದಲ್ಲಿ ಈ ಎಲ್ಲ ಪಾರಂಪರಿಕ ಗುಣಗಳು ಸಾಂದ್ರೀಕರಿಸಿವೆ.

'ಕರಾವು' ಕವನ ಸಂಕಲನ 1984ರಲ್ಲಿ ಪ್ರಕಟವಾಯಿತು. 1964ರಿಂದ 1984ರವರೆಗಿನ ಎರಡು ದಶಕಗಳ ಅವಧಿಯಲ್ಲಿ ಡಾ॥ ಮಳಲಿ ಅವರು ಬರೆದ ಕವಿತೆಗಳು ಇಲ್ಲಿ ಬೆಳಕುಕಂಡಿವೆ. ಒಟ್ಟು 32 ಕವನಗಳಿವೆ. ಕಾವ್ಯ ಸಂಕಲನದ ಆರಂಭದಲ್ಲಿ ಮಳಲಿ ಅವರೆ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ: 'ಒಂದೊಂದು ಕವಿತೆಗಳ ಭಾವ, ಭಾಷೆ, ಧೋರಣೆ, ಅಭಿವ್ಯಕ್ತಿಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ' ಎಂದು. 'ಗಾಂಧೀಮಹಿಮೆ' ಎಂಬ ಕವಿತೆ ಲಂಡನ್ನಿನಲ್ಲಿ ಗಾಂಧೀಜಿಯ ಪ್ರತಿಮೆಯನ್ನು ಸ್ಥಾಪಿಸಿದ ಸಂದರ್ಭದಲ್ಲಿ ಬರೆದುದಾಗಿದೆ. ಈ ಕವಿತೆ ವ್ಯಂಗ್ಯದ ಮೊನಚಿನಿಂದ ಗಮನ ಸೆಳೆಯುತ್ತದೆ. 'ಮೂಳೆ ಚಕ್ಕಳಗಳ ಮುದಿಯ ಗಾಂಧಿಯಲ್ಲಿ ನೆಹರುವಿನ ತೇಜಸ್ಸಾಗಲೀ, ಹಿಟ್ಲರನ ಬಲವಾಗಲೀ, ಸುಭಾಸ್‌ಚಂದ್ರ ಬೋಸರ ಶೌರ್ಯವಾಗಲೀ ಇರಲಿಲ್ಲ. ಊರಗೋಲು ಹಿಡಿದುಕೊಂಡೇ ಬ್ರಿಟಿಷರನ್ನು 'ಭಾರತ ಬಿಟ್ಟು ತೊಲಗಿ' ಎಂದು ಹೇಳುತ್ತಾ ಶಾಂತಿ–ಅಹಿಂಸೆ–ಸತ್ಯಾಗ್ರಹಗಳೆಂಬ ಬ್ರಹ್ಮಾಸ್ತ್ರಗಳನ್ನು ಬಿಟ್ಟ !" – ಗಾಂಧಿಯ ಮಹಿಮೆಯನ್ನು ಹೀಗೆ ವರ್ಣಿಸುತ್ತಾ 'ಇಂಗ್ಲೆಂಡಿನೊಳಗಿಂದು ಅವನದೇ ಪ್ರತಿಮೆ' ಎಂಬ ಶಬ್ದ ಚಿತ್ರವನ್ನು ಕಟ್ಟುತ್ತಾರೆ. ಭಾರತದಿಂದ ತಮ್ಮನ್ನು ಓಡಿಸಿದ ಮಹಾತ್ಮನ ಪ್ರತಿಮೆಯನ್ನು ಬ್ರಿಟಿಷರೇ ತಮ್ಮ ದೇಶದಲ್ಲಿ ಸ್ಥಾಪಿಸಿದ್ದು ಒಂದು ಸಾರ್ಥಕ ವಿಡಂಬನೆಯಾಗಿ ಮೂಡಿಸಿರುವುದು

ಕವಿಪ್ರತಿಭೆಗೆ ಹಿಡಿದ ಕೈಗನ್ನಡಿಯೇ ಸರಿ. ಪ್ರಕೃತಿ ಚಿತ್ರಣವನ್ನಂತೂ ತುಂಬಾ ಮನೋಹರವಾಗಿ ಚಿತ್ರಿಸಿದ್ದಾರೆ. ಆಧ್ಯಾತ್ಮಿಕ ಒಳನೋಟಗಳಿವೆ.

'ಕ್ರಾಂತಿ' ಎಂಬ ಕವನ ವಿಡಂಬನೆಯ ತೀವ್ರತೆ ಮಡುಗಟ್ಟಿ ನಿಂತ ಕವಿತೆಯಾಗಿ ಗಮನಸೆಳೆಯುತ್ತದೆ. ಸಾಮಾಜಿಕ ಚಳುವಳಿಯ ಕುರಿತು ಮಾತನಾಡುವ ಸಾಹಿತ್ಯದ ಕ್ರಾಂತಿಯೂ ಕೇವಲ ಭ್ರಾಂತಿ ಎಂಬುದನ್ನು ಹೇಳುತ್ತಲೇ ಮನುಷ್ಯನ ಸ್ವಾರ್ಥ ಲಾಲಸೆಯನ್ನು ಹಿಗ್ಗಾಮುಗ್ಗಾ ಎಳೆದುಹಾಕುವ ಕವನವಿದು. ಅಂತರಂಗದಲ್ಲಿರುವ ಕುಹಕತನವನ್ನು, ಮನುಷ್ಯನ ಪೊಳ್ಳು ಆದರ್ಶಗಳನ್ನು ಲೇವಡಿ ಮಾಡುವುದರ ಮುಖೇನ ಇವರ ಹಲವಾರು ಕವಿತೆಗಳು ನಮ್ಮನ್ನು ಚಿಂತನೆಗೆ ಹಚ್ಚುತ್ತವೆ.

ಮಾನವನ ಇಂದ್ರಿಯ ಲಾಲಸೆಯನ್ನು ಸಶಕ್ತವಾಗಿ ಅನಾವರಣಗೊಳಿಸುವ ನಾಲ್ಕಾರು ಕವನಗಳು ಈ ಸಂಕಲನದಲ್ಲಿ ಗಮನಸೆಳೆಯುತ್ತವೆ. 'ಅಹಲ್ಯಾ' ಎಂಬ ಕವನದಲ್ಲಿ 'ನೀನು ಮನಸೋತದ್ದು ಇಂದ್ರನ ವೈಭವಕ್ಕಲ್ಲ, ಇಂದ್ರಿಯದ ಐಭೋಗಕ್ಕೆ' ಈ ಸಾಲುಗಳಲ್ಲಿ ಲೈಂಗಿಕ ತೃಷ್ಣೆಯ ಸಹಜ ಚಿತ್ರವಿದೆ. ಗಂಡನಾದ ಗೌತಮಮುನಿ ತಪಸ್ಸುಮಾಡುತ್ತಾ ಜೀವನವನ್ನು ವ್ಯರ್ಥಗೊಳಿಸಿದ ಸಂದರ್ಭದಲ್ಲಿ ಅಹಲ್ಯೆಗೆ ಬೇಕಾದದ್ದು ಇಂದ್ರಿಯ ಸೌಖ್ಯ ಮಾತ್ರ ಎಂಬ ವಾಸ್ತವತೆಯನ್ನು ಇಲ್ಲಿ ನೋಡಬಹುದು.

'ಕರಾವು' ಸಂಕಲನದಲ್ಲಿರುವ ಇನ್ನೊಂದು ಗಮನಾರ್ಹ ಅಂಶವೆಂದರೆ ವ್ಯಕ್ತಿ ಚಿತ್ರಗಳದು. ಬಿ.ಎಂ.ಶ್ರೀ., ಕುವೆಂಪು, ಪುತಿನರಂತಹ ಕವಿಗಳು, ಗಾಂಧಿ, ಭೋಸರಂತಹ ನೇತಾರರು, ಅಹಲ್ಯೆ, ಕರ್ಣರಂತಹ ಪೌರಾಣಿಕ ವ್ಯಕ್ತಿಗಳು ಇಲ್ಲಿ ಸುವರ್ಣದ ಚೌಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಪುತಿನ ಅವರ ಮಾತನ್ನು 'ಹಾಲಹಳ್ಳದಲ್ಲಿ ಹಂಸೆ ಹೂವಡಿಯ ಇಟ್ಟ' ಹಾಗೆ ಪರಿಭಾವಿಸುವ ಕವಿ, 'ನೀ ಬೆಳೆದ ಬೆಳಕೆ ತೊಳೆಯಿತೆನ್ನಾ ತಮವ' ಎಂದು ಕುವೆಂಪುವನ್ನು ಸ್ಮರಿಸುತ್ತಾರೆ. ಅಟ್ಟು ಬಾ ದ್ವೇಷವನು ಸುಟ್ಟುಬಿಡು ಜಾತಿಯನು, ಕಟ್ಟು ರಕ್ಷೆಯ ತುಂಬಿ ಪ್ರೇಮರಸವ' ಎಂದು ಗಾಂಧಿಜಿಯನ್ನು ಮತ್ತೊಮ್ಮೆ ಹುಟ್ಟಿಬರುವಂತೆ ಕರೆಯುತ್ತಾರೆ. ಕನ್ನಡದ ಕಣ್ವ ಬಿ.ಎಂ.ಶ್ರೀ ಅವರನ್ನು ಚಿತ್ರಿಸುವಾಗಲಂತೂ ಕವಿಯಲ್ಲಿ ಸುಪ್ತವಾಗಿರುವ 'ಕೃಷಿಪ್ರಜ್ಞೆ' ಹೆಜ್ಜೆಹೆಜ್ಜೆಗೂ ವ್ಯಕ್ತಗೊಳ್ಳುತ್ತದೆ.

ಮುಂಗಾರು ಮಳೆಯಲ್ಲಿ ಕನ್ನಡ ಹೊನ್ನೆಲಕೆ
ಹೊನ್ನಾರು ಕಟ್ಟಿದವರು ನೀವು – ನವೋದಯದ ಬೀಜ ಬಿತ್ತಿದವರು
ಗರಿಕೆ ಕಟ್ಟಿದ ಹೊಲಕೆ ಅಡಿಗಾರು ಕಟ್ಟ ಸೀಳುಕ್ಕೆ ಹೊಡೆದು
ಭೂಮಿಯ ಹದಗೊಳಿಸಿದವರು ನೀವು
ಸಾಹಿತ್ಯ ಭೂಮಿಕೆಯ ನಿರ್ಮಿಸಿದವರು
ಗರಿ ಕಳಚಿ ಮುದುಡಿದ್ದ ಸಂಪ್ರದಾಯದ ಸಸಿಗೆ
ಪಾಶ್ಚತ್ಯ ಕಸಿಯ ಕಟ್ಟಿದವರು – ನೀವು
ಹೊಸ ತಳಿಯ ಈ ನೆಲಕೆ ಊರಿದವರು.

ಇವರ ಕಾವ್ಯದಲ್ಲಿ ನವೋದಯ, ನವ್ಯ, ಬಂಡಾಯದ ಬಾವುಟ ಹಾರುವುದನ್ನು ಗುರುತಿಸಬಹುದು. 'ಕಿಬ್ಬೊಟ್ಟೆಯ ಕಿರುಸ್ಥಳ', 'ಕಾಗದ ಕನ್ಯೆಯರು', 'ಆಸೆಯಂಗಡಿ ಸಾಲು', 'ಬಯಕೆ ಬಯಲು' ಮುಂತಾದ ಶಬ್ದಚಿತ್ರಗಳು ಮಳಲಿ ಅವರ ಅನನ್ಯ ರೂಪಕಗಳು. ಇವರ ಕಾವ್ಯಲಹರಿ ಬುದ್ಧಿಭಾವಗಳ ವಿದ್ಯುದಾಲಿಂಗನದಿಂದ ಕೂಡಿವೆ.

'ಕಡಲ ಕವಿತೆಗಳು' ಕವನ ಸಂಕಲನದಲ್ಲಿ 44 ಚುಟುಕು ಚಿತ್ರಗಳಿವೆ. ಚೆನ್ನೈನ ಕಡಲ ತೀರದಲ್ಲಿ ಕವಿ ಧ್ಯಾನಮಗ್ನರಾದಾಗ ಅವರ ಕವಿ ಹೃದಯದಿಂದ ಒಡಮೂಡಿದ ಮನಮಿಡಿಯುವಂಥ ಕಡಲ ಚಿತ್ರಗಳಂತೂ ಆಪ್ಯಾಯಮಾನವಾಗಿದೆ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕಡಲಿನ ವೈವಿಧ್ಯಪೂರ್ಣ ಒಳನೋಟಗಳ ಚಿತ್ರಣಗಳಿಗೆ ಅವಕಾಶವಿದೆ. ನಮ್ಮ ಪ್ರಾಚೀನ ಪರಂಪರೆಯ ಮಹಾಕಾವ್ಯದ ಅಷ್ಟಾದಶ ವರ್ಣನೆಗಳಲ್ಲಿ ಒಂದಾದ ಕಡಲ ಚಿತ್ರಣವೂ ಅದ್ಭುತ ರಮ್ಯವಾಗಿದೆ. ಈ ತೆರನಾಗಿಯೇ ಕಡಲ ವರ್ಣನೆಯ ಮೂಲಕ ಸ್ವಾನುಭವದಿಂದ ಕವಿ ಮಳಲಿ ಅವರ ಈ ಕವನ ಸಂಕಲನವು ಸೇರಿ ವಿಜೃಂಭಿಸುತ್ತದೆ.

ಕಡಲೊಡಲ ಹುತ್ತದಿಂದ
ಹೊರ ಬಂದ ಅಲೆನಾಗರಗಳು
ಹೆಡೆ ಬಿಚ್ಚಿ ತೆಕ್ಕೈಸಿ ಹಿಂಡುಹಿಂಡಾಗಿ
ಭೋರ್ಗರೆದು ನುಗ್ಗುತಿದೆ
ಭೂಮಿಯೆಡೆಗೆ !

ಸಾಗರದ ಅಲೆಗಳ ಈ ಚಿತ್ರಗಳು ರೋಚಕವಾಗಿವೆ. ಏಕಕಾಲದಲ್ಲಿ ಸೂರ್ಯಾಸ್ತ ಮತ್ತು ಪೂರ್ಣ ಚಂದ್ರೋದಯಗಳ ಅಪರೂಪದ ಚಿತ್ರಣವನ್ನು ಆಕರ್ಷಕವಾಗಿ ಕಟ್ಟಿಕೊಡುತ್ತಾರೆ. ನಮ್ಮ ಹೃನ್ಮನಗಳನ್ನು ಇಲ್ಲಿಯ ಕವಿತೆಗಳು ಸೆರೆಹಿಡಿಯುತ್ತವೆ. ಇಲ್ಲಿಯ ಕಡಲ ತಾಯಿ ಮತ್ತು ಮೋಡಕಂದರಿಬ್ಬರ ಅನ್ಯೋನ್ಯ ಸಂಬಂಧದ ಚಿತ್ರ ಮನೋಹರವಾಗಿವೆ.

ಕಡಲಿನ ಅಲೆಗಳ ಏರಿಳಿತಗಳಿಗೆ, ಅವುಗಳ ಭೋರ್ಗರತೆಗಳಿಗೆ ಕ್ಷಣಕ್ಷಣಕ್ಕೂ ಬದಲಾಗುವ ಅವರ ಮೈಮಾಟಗಳಿಗೆ ಸೂರ್ಯಚಂದ್ರರೂ ಬಹುಮಟ್ಟಿಗೆ ಕಾರಣರಾಗಿದ್ದಾರೆ. ಆ ಕ್ರಿಯೆಗಳನ್ನು ಮಳಲಿ ಅವರು ತಮ್ಮ ಕಲ್ಪನೆಯೊಂದಿಗೆ ವರ್ಣಿಸಿರುವ ರೀತಿ ಮಾತ್ರ ಸುಂದರವಾಗಿದೆ – ಹೀಗೆ ಕಡಲಿನ ನಾನಾ ಮುಖಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಡಾ॥ ಮಳಲಿ ಅವರು ನಾಟಕಗಳನ್ನು ರಚಿಸಿದ್ದಾರೆ. 'ಯಮಧರ್ಮ', 'ಲಂಕೇಶ್ವರ' ಅವರ ಎರಡು ನಾಟಕಗಳು. 'ಯಮಧರ್ಮ ಮತ್ತು ಲಂಕೇಶ್ವರ' ನಾಟಕಗಳು ವಿಮರ್ಶಕರ ಮೆಚ್ಚುಗೆಯನ್ನು ಸಂಪಾದಿಸಿವೆ. ಈ ಎರಡು ನಾಟಕಗಳಲ್ಲಿ ಭಾರತೀಯ ಪುರಾಣ ಪ್ರಪಂಚದಲ್ಲಿ ಕಂಡುಬರುವ ಪಾತ್ರಗಳಾಗಿವೆ. ಕಾಲಮಾನಕ್ಕೆ ಮತ್ತು ವಿವಿಧ ಮನೋಧರ್ಮಕ್ಕೆ ಅನುಗುಣವಾಗಿ ಪರಿವರ್ತನೆ ಮತ್ತು ಮರುಸೃಷ್ಟಿ ಮಾಡುವುದರ ಮುಖೇನ ಹೊಸ ಪ್ರಯತ್ನವನ್ನು ನಾಟಕಕಾರರು ಮಾಡಿದ್ದಾರೆ.

ಸತ್ಯವಾನ ಸಾವಿತ್ರಿಯವರ ಹಳೆಯ ಕಥೆಯನ್ನು ವಸ್ತುವಾಗಿಸಿಕೊಂಡಿರುವ ಡಾ॥ ಮಳಲಿ ಅವರ ಯಮಧರ್ಮ ನಾಟಕವು ಅವತರಿಸಿದೆ. ಪುಟ್ಟಪುಟ್ಟವಾದ ಎಂಟು ದೃಶ್ಯಗಳು ಓದುಗರಿಗೆ ಮನಸೆಳೆಯುತ್ತದೆ. ವಸ್ತುವಿಗೆ ಅನುಗುಣವಾಗಿ ಇಹಲೋಕ ಮತ್ತು ಯಮಲೋಕದ ಸನ್ನಿವೇಶಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಸತ್ಯವಾನ್ ಸಾವಿತ್ರ, ಯಮಧರ್ಮ, ಯಮದೂತ ಹಾಗೂ ಚಿತ್ರಗುಪ್ತರೆಂಬ ಐದು ಪಾತ್ರಗಳಿವೆ. ಸಾವಿತ್ರಿ ಮತ್ತು ಯಮಧರ್ಮ ಇವರ ನಡುವೆ ಸಾವಿನ ಸಮಸ್ಯೆಯನ್ನು ಕುರಿತು ನಡೆಯುವ ಸಂವಾದದಲ್ಲಿ ನಾಟಕ ಬೆಳೆಯುತ್ತದೆ. ಸಾವಿತ್ರಿಯ ಸತಿಭಕ್ತಿ, ವ್ರತನಿಷ್ಠೆ ಹಾಗೂ ಆಕೆ ಒಡ್ಡುವ ತರ್ಕಕ್ಕೆ ತಬ್ಬಿಬ್ಬಾಗಿ ವಿಚಲಿತನಾಗಿ ಯಮಧರ್ಮನು ಅಪ್ರಾಜ್ಞಪೂರ್ವಕವಾಗಿ ಆಕೆಯ ಗಂಡ ಬದುಕುವುದಕ್ಕೆ ಅನುಕೂಲಕರವಾದ ವರವನ್ನು ಕೊಡುವುದರ ಮೂಲಕ

ನಾಟಕ ಮುಕ್ತಾಯವಾಗುತ್ತದೆ. ನಾಟಕದುದ್ದಕ್ಕೂ ಒಡೆದು ಕಾಣುವ ವಿಶೇಷವೆಂದರೆ ಆಕರ್ಷಕವಾಗಿರುವ ಕಾವ್ಯಶಕ್ತಿ ಸಹಜವಾದ ಒಂದು ಪ್ರಾಕೃತಿಕ ಕ್ರಾಂತಿಯನ್ನು ತರುವುದರ ಜೊತೆಗೆ, ಇಡಿಯಾಗಿ ನಾಟಕವನ್ನು ಓದಿದ ಮೇಲೆ ಸನ್ನಿವೇಶಗಳು ಸದಾ ಮನಸ್ಸಿನಲ್ಲಿ ಉಳಿಯುವಂತಹವುಗಳಾಗಿವೆ.

'ಲಂಕೇಶ್ವರ' ನಾಟಕ ಸಂಸ್ಕೃತಿ ಶೋಧನೆಯ ನೆಲೆಗಟ್ಟಿನ ಮೇಲೆ ರಚಿತವಾದುದು. ಇಲ್ಲಿಯ ರಾವಣ ಲಂಕೇಶ್ವರ ನಾಟಕದ ನಾಯಕನೇ ಆದರೂ ರಾಮನ ಪ್ರತಿನಾಯಕ ಮಾತ್ರವಲ್ಲ, ರಾಮನೊಡನೊಡನೆಯೇ ಬೆಳೆದವನು. ಉಭಯ ನಾಯಕರ ಉದಾತ್ತೀಕರಣವೇ ನಾಟಕದ ಆಶಯವಾಗಿದೆ. ನಾಯಕ – ಪ್ರತಿನಾಯಕರ ಸಂಭಾಷಣೆ – ವಾಗ್ವಾದಗಳು ಕಂಡುಬರುವುದು ಕಡಿಮೆ. ಮಹಾಮಹಿಮರ ಸಂವಾದದ ಸಹಸ್ಪಂದನವಾಗಿ ಕಂಡುಬರುತ್ತದೆ. ಸಂಘರ್ಷದ ಹಾದಿಗಿಂತ ಮೌಲ್ಯಸಾಮರಸ್ಯದೆಡೆಗೆ ತುಡಿಯುತ್ತದೆ. ರಾವಣನ ಪಾತ್ರದ ಉದಾತ್ತೀಕರಣ, ವಿಶ್ವಖುತದ ಅಂತಿಮ ನಿರ್ಣಯ, ಲೋಕದ ಬದುಕನ್ನು ಕಟ್ಟಿಕೊರಗಿಸುವ ವಿಧಿ, ಕರ್ಮದ ಗಹನಗತಿ, ಹೀಗೆ ಹಲವಾರು ಪ್ರಸಂಗಗಳನ್ನು ಸ್ವಂತಿಕೆಯಿಂದ ನಿರ್ಮಿಸಿದ್ದಾರೆ.

'ಲಂಕೇಶ್ವರ' ನಾಟಕದಲ್ಲಿನ ದೃಶ್ಯಗಳು ಅದ್ಭುತ. ಮಳಲಿಯವರು ದೃಶ್ಯಗಳನ್ನು ಕಟ್ಟಿರುವ ರೀತಿ ರಂಗಾಸ್ತಕರ ಗಮನಸೆಳೆಯುತ್ತದೆ. ರಾವಣನ ಮಾತುಗಳಂತೂ ಮಳಲಿಯವರ ಲೇಖನಿಗೆ ಸವಾಲಾಗಿ ಪರಿಣಮಿಸಿದೆ. ಈ ನಾಟಕ ರಚನೆಯ ಹಿಂದೆ ನಾಗಚಂದ್ರ ಮತ್ತು ಕುವೆಂಪು ಅವರ ಪ್ರಭಾವವಿದೆ. ಆದರೆ ಆ ಪ್ರಭಾವಗಳನ್ನು ಮೀರಿದ ಸ್ವಂತ ಹೊಳಹುಗಳು, ಸನ್ನಿವೇಶ ನಿರ್ಮಾಣ, ಬಿಗಿಯಾದ ಬಂಧ, ಭಾಷೆಯ ಬಳಕೆ ನೋಡಿದಾಗ ಉತ್ತಮ ಸೃಜನಶೀಲ ಕೃತಿಗಳಲ್ಲಿ ಇದು ಒಂದು. ನಾಟಕದಲ್ಲಿ ಅಲ್ಲಲ್ಲಿ ಬರುವ ಕೆಲವು ಬಿಡಿ ಕವನಗಳು ಸಹೃದಯರಿಗೆ ಮನಮಿಡಿಯುವಂತಿವೆ. 'ಲಂಕೇಶ್ವರ' ನಾಟಕದ ಬಗ್ಗೆ ಪ್ರೊ. ಎಚ್. ತಿಪ್ಪೇರುದ್ರಸ್ವಾಮಿ ಅವರು ಹೀಗೆ ಬರೆದಿದ್ದಾರೆ: 'ರಾವಣ ಒಬ್ಬ ಮಹಾನ್‌ಯೋಗಿ. ಮಳಲಿ ವಸಂತಕುಮಾರ್ ಅವರ 'ಲಂಕೇಶ್ವರ' ನಾಟಕದಲ್ಲಿ ಈ ಯೋಗಸಿದ್ಧಿಯ ಪೂರ್ಣತೆಯನ್ನು ಕಾಣುತ್ತೇವೆ. ಇದೊಂದು ಹೊಸ ಮುಖ. ಒಳ್ಳೆಯ ಆಯಾಮದಿಂದ ಮಳಲಿ ಅವರು ಈ ನಾಟಕವನ್ನು ರಚಿಸಿದ್ದಾರೆ. ರಾವಣ ಚಿತ್‌ತಪಶ್ರೀಯ ಏರುವಿಕೆ ಹಂತಹಂತವಾಗಿ ಮನೋಜ್ಞವಾಗಿ ಮೂಡಿ

ಬಂದಿದೆ. ಆತನಲ್ಲಿ ಸೀತೆಯನ್ನು ಅಪಹರಿಸಿದಾಗ ಇದ್ದ ತಾಮಸ ಪ್ರವೃತ್ತಿ ಬದಲಾಗಿ, ರಾಮನನ್ನು ಗೆದ್ದು ಸೀತೆಯನ್ನು ಒಪ್ಪಿಸಬೇಕೆಂಬ ರಜೋಗುಣಕ್ಕೆ ತಿರುಗಿ, ಕೊನೆಗೆ 'ಭಗವದಾರಾಧನೆಯ ಮುಂದೆ ಎಲ್ಲಾ ಭೋಗಗಳೂ ಶೂನ್ಯ. ಎಲ್ಲ ಭಾಗ್ಯಗಳೂ ಕೃತಕ. ಜೀವಿಗೆ ದೇವಸನ್ನಿಧಿಯೊಂದೇ ನೆಮ್ಮದಿಯ ತಾಣ' ಎಂದು ಮನಸ್ಸು ಸಾತ್ವಿಕ ಸತ್ವದ ತಪಸ್ಸಿಗಾಶಿಸುವುದು ವಿಕಾಸ ಕ್ರಿಯೆಯ ಸಹಜ ನಡೆಯಾಗಿದೆ. ಭಾರತೀಯ ಸಂಸ್ಕೃತಿಯ ಮನೋವೈಜ್ಞಾನಿಕ ದೃಷ್ಟಿಯಿಂದ ಹೆಚ್ಚು ಅರ್ಥಪೂರ್ಣವಾಗಿದೆ.

ಇಲ್ಲಿನ ಎಲ್ಲ ಪಾತ್ರಗಳು ಪೂರಕವೆನಿಸಿಕೊಂಡಿವೆ. ನಾರದ ರಾವಣರ ಮಾತುಗಳು ಗಹನವಾದ ಚಿಂತನೆಗೆ ದೂಡುತ್ತವೆ. ಅದಕ್ಕಿಂತ ಮುಖ್ಯವಾಗಿ ಸೀತೆ ಮಂಡೋದರಿಯರ ಸಂವಾದ ಹೃದಯ ಕಲಕುವಂತಿದ್ದು ಎಂತಹವರ ಕಣ್ಣಲ್ಲೂ ನೀರು ತರಿಸುತ್ತದೆ.

ಒಟ್ಟಾರೆ, ಮಳಲಿ ಅವರ 'ಲಂಕೇಶ್ವರ' ಮನೋಜ್ಞವಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯುನ್ನತ ಶ್ರೇಣಿಗೆ ಸೇರುವಂತಹದಾಗಿದೆ ಎಂದು ಹೇಳಿರುವುದು ಉಚಿತವಾದ ಅಂಶಗಳಾಗಿವೆ. ಒಟ್ಟಿನಲ್ಲಿ 'ಲಂಕೇಶ್ವರ' ನಾಟಕ ಹೊಸ ಹೊಸ ಅರ್ಥಗಳನ್ನು ಹುಡುಕುತ್ತಾ ಪಡೆಯುತ್ತಾ ಪಡಿನುಡಿಯುತ್ತಾ ಲವಲವಿಕೆಯಿಂದ ವೇಗವಾಗಿ ಸಾಗುತ್ತದೆ. ಸಂಭಾಷಣೆಯಲ್ಲಾಗಲೀ, ಸನ್ನಿವೇಶ ನಿರ್ಮಾಣದಲ್ಲಾಗಲೀ ಎಲ್ಲಿಯೂ ನೀರಸ ಎನಿಸುವುದಿಲ್ಲ. ಹಲವಾರು ಬಾರಿ ಈ ನಾಟಕ ರಂಗಪ್ರಯೋಗವಾಗಿದೆ.

**'ಈಡು'** ಪ್ರೊ. ಮಳಲಿ ಅವರು ಬರೆದ ಹತ್ತು ಕಥೆಗಳ ಸಂಕಲನ. ಆಕರ್ಷಕ ರೀತಿಯಲ್ಲಿ ಗ್ರಾಮ್ಯ ಜೀವನದ ಅಂಶಗಳನ್ನು ಕಥೆಗಳಲ್ಲಿ ತೆರೆದಿಟ್ಟಿದ್ದಾರೆ. ಮಳಲಿ ಅವರೆ ಕಥೆಗಳ ಬಗ್ಗೆ ಹೀಗೆ ಹೇಳುತ್ತಾರೆ : 'ಇಲ್ಲಿನ ಯಾವ ಕತೆಯೂ ಕಲ್ಪನೆಯಿಂದ ಊಹೆಯಿಂದ ರಚನೆಗೊಂಡಿಲ್ಲ. ಸಮಾಜದಲ್ಲಿ ಕಣ್ಣಾರೆ ಕಂಡ ಘಟನೆಗಳು, ಸಂಗತಿಗಳು ಕತೆಯಾಗಿ ರೂಪುಗೊಂಡಿವೆ. ಸಮರ್ಥ ಕತೆಗಾರ ತಂತ್ರಗಳನ್ನು ಅನುಸರಿಸಿ ಕತೆ ಬರೆಯುವುದಿಲ್ಲ. ಸಮರ್ಥ ಕತೆಗಳನ್ನು ಅನುಸರಿಸಿ ಬೇಕಾದವರು ತಂತ್ರಗಳನ್ನು ರೂಪಿಸಬಹುದು. ಟಾಲ್‌ಸ್ಟಾಯ್ ಅಭಿಪ್ರಾಯ ಕೂಡ ಇದೇ ಆಗಿತ್ತು' ಎಂದು ಹೇಳಿದ್ದಾರೆ. ಸಂಕಲನದ ಮೊದಲ ಕಥೆ 'ಸಾಸ್ತ್ರ' ಕೇಳಿದ ಸಂಗತಿಗಳನ್ನು ಮಳಲಿ ಅವರು ಒಂದು ಉತ್ತಮ ಕಥೆಯನ್ನಾಗಿ

ಮಾಡಿದ್ದಾರೆ. ಹಳ್ಳಿಗರ ಮೂಢನಂಬಿಕೆ ಒಂದು ಕಡೆಯಾದರೆ ಗಂಡನ ಅಸಹಾಯಕ ಪರಿಸ್ಥಿತಿ ಇನ್ನೊಂದು ಕಡೆ. ಹೀಗೆ ಪ್ರಾರಂಭವಾಗುವ ಕಥೆ, ನಂಬಿಕೆ, ಅಸಹಾಯಕತನಗಳನ್ನು ಕಥೆಯಲ್ಲಿ ತೆರೆದಿಟ್ಟಿದ್ದಾರೆ. 'ಅಪಥ್ಯ' ಕಥೆಯೂ ಉತ್ತಮವಾಗಿ ಮೂಡಿಬಂದಿದೆ. 'ಈಡು' ಕಥೆ ಒಬ್ಬ ಶಿಕ್ಷಕಿಯ ದುರಂತ ಕಥೆಯಾಗಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸಮಾಡುವ ಹೆಂಗಸರ ಗತಿಯೇನಪ್ಪ ಎಂಬುವಷ್ಟರ ಮಟ್ಟಿಗೆ ಚಿತ್ರಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸ್ವಾರ್ಥಪರವಾದ ಅಧಿಕಾರಿಗಳು, ಪ್ರಿನ್ಸಿಪಾಲರು, ಸ್ವಾಮಿಗಳು ಇದ್ದರೆ ಏನಾಗುತ್ತದೆಂದು ಈ ಕಥೆ ಬಹಳ ಉತ್ತಮವಾಗಿ ಉತ್ತರ ನೀಡುತ್ತದೆ.

ಕೆಟ್ಟ ದೃಷ್ಟಿಯ, ಕಪ್ಪು ಮನಸ್ಸಿನ ವಿಕೃತ ಬುದ್ಧಿಯ ಕಾಲೇಜಿನ ಪ್ರಿನ್ಸಿಪಾಲನಿಂದ, ಸ್ವಾಮಿಗಳಿಂದ ಒಬ್ಬ ನಿಷ್ಠಾವಂತ ಅಧ್ಯಾಪಕಿ ಅನುಭವಿಸುವ ನೋವು, ಕೆಡಕುಗಳ ಚಿತ್ರಣ ಜೊತೆಗೆ ಇವರೊಂದಿಗೆ ಕೈಜೋಡಿಸುವ ಆಡಳಿತಾಂಗ ಇವೆಲ್ಲದರ ಕಾಟದಿಂದ ತಪ್ಪಿಸಿಕೊಂಡು ಬದುಕಲು ಅಧ್ಯಾಪಕಿಯ ಹೋರಾಟ ನಡೆದರೂ ಸತ್ಯಮೇವ ಜಯತೇ ಎಂಬುದು ಅಣುಕು ಹಾಡಾಯಿತೇನೋ ಎನ್ನುವಂತೆ ಅಧ್ಯಾಪಕಿಯ ಸೋಲು, ಕಥೆಯಲ್ಲಿ ಬರುವ ಇತರ ಪಾತ್ರಗಳು ಸುಖಕ್ಕೆ, ಹಣಕ್ಕೆ, ಅಧಿಕಾರಕ್ಕೆ, ತಮ್ಮದೆಲ್ಲವನ್ನೂ ಮಾರಿಕೊಳ್ಳುವ ಜನ ಈಗಲೂ ನಮಗೆ ಕಾಣದಂತೆ ನಮ್ಮ ಸುತ್ತಮುತ್ತ ಇರಬಹುದು. ಇದರಲ್ಲೇನೂ ಆಶ್ಚರ್ಯವಿಲ್ಲ. ಈ ರೀತಿಯ ಶೋಷಕರು ಇರುತ್ತಾರೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತಾರೆ. ಮುಖ್ಯವಾಗಿ ಈಡು ಕಥೆಯಲ್ಲಿ ದುಷ್ಟರ ಗುರಿಗೆ ಈಡಾಗಿ ನರಳುವ ಅಧ್ಯಾಪಕಿ ಬಗ್ಗೆ ನಮಗೆ ಸಹಜವಾಗಿಯೇ ಮರುಕವನ್ನು ಉಂಟುಮಾಡುತ್ತದೆ. 'ಮಂಜುಳೆ ಮುಳ್ಳಿನ ಮಧ್ಯೆ ಸೇರಿದ ಬಾಳೆಯ ಸುಳಿಯಂತಾದಳು' ಎಂಬ ಮಾತುಗಳು ಬಹಳ ಮಾರ್ಮಿಕವಾಗಿವೆ.

'ಸ್ಥಿತ್ಯಂತರ' ಕಥೆ ಹೆಣ್ಣಿನ ಶೋಷಣೆ, ಹಾದರ, ಸೂಳೆ ಇವುಗಳ ಸಂಬಂಧ, ಮೋಸಗಾರ ಗಂಡು, ನಂಬಿಕೆಟ್ಟ ಹೆಣ್ಣು ಇವೆಲ್ಲ ವಿಷಯಗಳು ಈ ಕಥೆಯಲ್ಲಿ ಒಡಮೂಡಿವೆ. 'ಸಿಕ್ಕು' ಕಥೆ ಮಾನವರ ಜೀವನ ಅನೇಕ ಸಿಕ್ಕುಗಳಿಂದ ಕೂಡಿದೆ ಎಂಬ ಅಂಶವನ್ನು ಬಯಲಿಗೆಳೆಯುತ್ತದೆ. ಕಥೆಯಲ್ಲಿ ಬರುವ ಚಂದ್ರಕ್ಕ ತನ್ನ ಮನೆಯ ಗೊಂದಲ, ಗೋಜಲು ಬಿಡಿಸಲು ಪ್ರಯತ್ನಪಟ್ಟು ಸಿಕ್ಕುಬಿಡಿಸಲು ಹೋಗಿ ಗಂಟು ಬಲವಾಗಿಯೇ ಊರಿಕೊಂಡು ಬಿಚ್ಚಲಾಗದಂತೆ ಆಗುವ

ದುರಂತ ನಡೆದುಹೋಗುತ್ತದೆ. ಅತ್ತೆ-ಮಾವ ಇಲ್ಲದ ಮನೆಯಲ್ಲಿದ್ದುಕೊಂಡೇ ಕುಡುಕ ಗಂಡನನ್ನು ಕಟ್ಟಿಕೊಂಡು ಬಾಳ್ವೆ ನಡೆಸುವ ಚಂದ್ರಕ್ಕನ ಜೀವನ ಮನೆಯಲ್ಲಿ ಒಲೆಯ ಉರಿಯಂತೆ ಉರಿಯುತ್ತಿತ್ತು. ಕಥೆಯಲ್ಲಿ ಗ್ರಾಮ ಜೀವನದ ಗಾಢ ಚಿತ್ರಣವಿದೆ. ಗ್ರಾಮ್ಯಭಾಷೆಯನ್ನು ಅದ್ಭುತವಾಗಿ ಬಳಸಿಕೊಂಡಿದ್ದಾರೆ. ಕೊಂಗರಹಳ್ಳಿ ದೆವ್ವ ಬಿಡಿಸಿದೆ ಅಂದರೆ ಮುಂಗರಹಳ್ಳಿ ಪಿಶಾಚಿ ಹಿಡಕತ್ತು'. 'ರುಚಿಕಂಡ ನಾಯಿ ಜಾಡ ಮರ್ತಾತ', 'ಬೆಳ್ಳುಳ್ಳೀಲಿ ಬಂದದ್ದು ಗೊಳ್ಳೇಲಿಹೋಯ್ತು', 'ಮುಸುರೆ ನೆಕ್ಕೋನ್ಗೆ ಮೊಸರ್‍ಯಾಕೆ', 'ಬಾಡಿನ ವಾಸನೆಗೆ ನಾಯಿ ಹೋಗುವಂತೆ.' ಹೀಗೆ ಗ್ರಾಮ್ಯ ಭಾಷೆಯ ಆಡುನುಡಿಗಳನ್ನು ಹೇರಳವಾಗಿ ಕಾಣಬಹುದು.

'ರಿಕ್ತ' ಕಥೆ ನಮ್ಮ ಗ್ರಾಮಗಳಲ್ಲಿನ ಒಬ್ಬ ಬಡ ರೈತನ ಕಥೆ. ಸಾಮಾನ್ಯ ರೈತನ ಬಾಳಿನ ಚಿತ್ರಣವನ್ನು ಓದುಗರ ಕಣ್ಣಲ್ಲೂ ನೀರು ಬರುವಂತೆ ಚಿತ್ರಿಸಿದ್ದಾರೆ. ಮಾದಣ್ಣ ಸಾಲಮಾಡಿ, ಮಗನನ್ನು ಒತ್ತೆಯಿಟ್ಟು ಆಲೂಗೆಡ್ಡೆ ಬೆಳೆಯಲು ಹೊರಟ. ಮಳೆರಾಯ ಕೈಕೊಟ್ಟ, ನೀರಾವರಿ ಇಲ್ಲದ ಕಡೆ ರೈತರ ಬಾಳು ಕಣ್ಣುಕಟ್ಟಿ ಕಾಡಿಗೆ ಬಿಟ್ಟಂತೆ. ರೈತರನ್ನು ಹಳ್ಳಿಗಳಲ್ಲಿ ಹಣವಂತ ರೈತನೇ ಸುಲಿದು ತಿನ್ನುವುದನ್ನು ಈ ಕಥೆಯಲ್ಲಿ ಮುಖ್ಯವಾಗಿ ಗುರುತಿಸಬಹುದು. ಸಾಲಕ್ಕೆ ಹೊಲ, ಮನೆ, ಬಡ್ಡಿಗೆ ಮಕ್ಕಳನ್ನು ಒತ್ತೆಯಿಟ್ಟು ಮಾದಣ್ಣ ವಂಚನೆಗೆ ಗುರಿಯಾದ ವಿವರಗಳಂತು ಮನಮಿಡಿಯುತ್ತವೆ. ಹಳ್ಳಿಗಾಡಿನ ನೈಜಚಿತ್ರಣವನ್ನು ಕಥೆಯ ರೂಪದಲ್ಲಿ ಕೊಟ್ಟಿರುವುದು ನಿಜಕ್ಕೂ ಓದುಗರಿಗೆ ಬೆರಗನ್ನುಂಟುಮಾಡುತ್ತದೆ. 'ನಂಜ' ಕಥೆಯಲ್ಲಿ ಬರುವ ಜಯಣ್ಣ ಓದಿದವ. ಆದರೆ ಎಲ್ಲ ಚಟಗಳಿಗೂ ದಾಸನಾದವ. 'ವಂಚನೆ' ಅಂಶ ಮುಖ್ಯವಾಗಿ ಈ ಕಥೆಯಲ್ಲಿ ಕಂಡುಬರುತ್ತದೆ.

'ಹರ್ಷ' ಕಥೆ ಮನಮಿಡಿಯುವ ಹಾಗೆ ಮಳಲಿ ಅವರು ಚಿತ್ರಿಸಿದ್ದಾರೆ. ಹರ್ಷ ಮನೆಯವರು ಸಾಕಿದ ಮುದ್ದಿನ ನಾಯಿಯ ಹೆಸರು. ಚಿರತೆ ಬಾಯಿಗೆ ಆಹಾರವಾದಾಗ ಕಥೆಗಾರರಿಗೆ ಈ ಜಗತ್ತಿನಲ್ಲಿ ಜೀವಿಗಳ ಅನಿಶ್ಚಿತ ಬದುಕಿನ ಬಗ್ಗೆ ಚಿಂತಿಸುವಂತೆ ಮಾಡಿಬಿಡುತ್ತದೆ. 'ಅನಿವಾರ್ಯ' ಕಥೆ ರಾವಣಪ್ಪ ಎಂಬ ಗ್ರಾಮಸ್ಥನ ಬೀಳಿನ ಕಥೆಯಾಗಿದೆ. 'ಅಭಿಸಾರ' ಮಾನವನ ದೌರ್ಬಲ್ಯವನ್ನು ಹೇಳುವ ಕಥೆಯಾಗಿದೆ. ಈಡು ಕತೆಗಳನ್ನು ಓದಿದ ರಾಷ್ಟ್ರಕವಿ ಕುವೆಂಪು ಅವರು ಈ ರೀತಿ ಅಭಿಪ್ರಾಯಪಡುತ್ತಾರೆ : 'ನಿಮ್ಮ 'ಈಡು' ಕತೆಗಳನ್ನು ಓದಿದೆ. ಅಲ್ಲಿನ ಜೀವನದ ಭಯಂಕರತೆ ನನ್ನನ್ನು ಗಾಢವಾಗಿ ಕಲಕಿತು. ಜೀವನದ

ಕ್ರೌರ್ಯವನ್ನು, ಸಾಮಾಜಿಕ ಶೋಷಣೆಯನ್ನು ಅತ್ಯಂತ ಶಕ್ತಿಯುತವಾಗಿ ಚಿತ್ರಿಸಿದ್ದೀರಿ'.

ಅಪಥ್ಯ, ಸ್ಥಿತ್ಯಂತರ, ರಿಕ್ತ ಮತ್ತು ಈಡು ಕತೆಗಳು ನನ್ನ ಮೇಲೆ ತೀವ್ರ ಪರಿಣಾಮ ಉಂಟುಮಾಡಿದವು. ಅದು ಎಷ್ಟರಮಟ್ಟಿಗೆಂದರೆ ನಾನು ಸಹ ಎರಡು ದಿನ ನಿದ್ರೆ ಮಾಡಲಾಗಲಿಲ್ಲ. As stories they are very efficient (ಕುವೆಂಪು 17–10–1883). ಒಟ್ಟಿನಲ್ಲಿ ಈ ಕೃತಿಯಲ್ಲಿ ಗ್ರಾಮೀಣ ಜನತೆಯ ನೋವು, ನಲಿವುಗಳನ್ನು, ಶೋಷಣೆಗಳನ್ನು, ಗ್ರಾಮೀಣ ಬದುಕನ್ನು ಗ್ರಾಮೀಣ ಭಾಷೆಯಿಂದಲೇ ಸಹಜವಾಗಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಅನುಭವದ ಗಾಢತೆ ಈ ಕಥೆಗಳ ಹಿಂದಿದೆ. ಒಟ್ಟಿನಲ್ಲಿ 'ಈಡು' ಕಥಾಸಂಕಲನದಲ್ಲಿರುವ ಕಥೆಗಳು ನಮ್ಮನ್ನು ಗ್ರಾಮಜೀವನಮುಖಿಯಾಗಿ ಚಿಂತನೆಮಾಡಲು ಅವಕಾಶ ಮಾಡಿಕೊಡುತ್ತದೆ.

ಕುವೆಂಪು ಅವರ ಸಮಗ್ರ ನಾಟಕಗಳನ್ನು ಕುರಿತು ವಸ್ತುನಿಷ್ಠ ಮತ್ತು ಅಧಿಕೃತ ಚಿಂತನೆಗಳಿಂದ ಗಂಭೀರವಾದ ಸಂಶೋಧನೆ ಮಾಡಿದ್ದು ಕನ್ನಡ ಸಂಶೋಧನೆ ಕ್ಷೇತ್ರಕ್ಕೆ ಒಂದು ಹೆಗ್ಗಳಿಕೆ. ಒಟ್ಟು ಎಂಟು ಅಧ್ಯಾಯಗಳಲ್ಲಿ ಕುವೆಂಪು ಅವರ ನಾಟಕಗಳನ್ನು ಅಧ್ಯಯನ ಮಾಡಿದ್ದಾರೆ. ನಾಟಕ ಎಂದರೇನು? ಎಂಬುದರಿಂದ ಪ್ರಾರಂಭಿಸಿ, ಕುವೆಂಪು ಅವರ ನಾಟಕಗಳವರೆಗಿನ ಬೆಳವಣಿಗೆಯನ್ನು ಗುರುತಿಸಿದ್ದಾರೆ. ತುಂಬ ಉಪಯುಕ್ತ ಮಾಹಿತಿಗಳನ್ನು ಓದುಗರಿಗೆ ಒದಗಿಸಿಕೊಟ್ಟಿದ್ದಾರೆ.

ಕುವೆಂಪು ಅವರ ಹದಿನಾಲ್ಕು ನಾಟಕಗಳನ್ನು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ರೂಪಾಂತರ, ಮಕ್ಕಳ ನಾಟಕಗಳು ಎಂಬುದಾಗಿ ವಿಭಾಗ ಮಾಡಿಕೊಂಡು ಮೂರು ಅಧ್ಯಾಯಗಳಲ್ಲಿ ತೌಲನಿಕವಾಗಿ ವಿವೇಚಿಸಿದ್ದಾರೆ. ಕುವೆಂಪು ಅವರನ್ನು ಆಕರ್ಷಿಸಿರುವ ವಸ್ತುಗಳ ಸಾಮಾನ್ಯ ಸ್ವರೂಪದ ಬಗ್ಗೆ ಚರ್ಚಿಸುತ್ತಾ, ಶುದ್ಧ ಮೌಲ್ಯಗಳ ಆಕರ್ಷಣೆ ಪುನರ್ ಮೌಲೀಕರಣ ಮೂಲಕ ಪಾತ್ರಗಳಿಗೆ ಅಂಟಿದ್ದ ಕಳಂಕವನ್ನು ತೊಡೆವ ಪ್ರಯತ್ನ ಇತ್ಯಾದಿ ಕಾರಣಗಳನ್ನು ಸಮರ್ಥವಾಗಿ ಗುರುತಿಸಿದ್ದಾರೆ. ಬೆರಳ್ಗೆ–ಕೊರಳ್ ನಾಟಕದಲ್ಲಿ ಏಕಲವ್ಯನ ತಾಯಿಯ ಪಾತ್ರ ನಾಟಕದ ಆದಿ–ಮಧ್ಯ–ಅಂತ್ಯಗಳ ಶಕ್ತಿಯಾಗಿ ಹೇಗೆ ಕೆಲಸ ಮಾಡುತ್ತದೆ ; ತಾಯಿಯ ಶಾಪವಚನವೇ ನಾಟಕದ ಹೆಸರಾಗಿರುವುದರ ಧ್ವನಿ

; ಇದೇ ನಾಟಕ 'ಯಜ್ಞ' ತತ್ತ್ವದ ಪ್ರತೀಕವಾಗಿದ್ದು, ಏಕಲವ್ಯ 'ಯಜ್ಞಪಶು'ವಾಗಿರುವುದು, ಏಕಲವ್ಯ ವರ್ಣವ್ಯವಸ್ಥೆ ಮಾತ್ರವಲ್ಲ ವರ್ಗವ್ಯವಸ್ಥೆಯ ಸಾಮಾಜಿಕ ಪ್ರತಿನಿಧಿಯಾಗಿರುವುದು ಇತ್ಯಾದಿ ಅಂಶಗಳನ್ನು ಬಹಳ ನಿಖರವಾಗಿ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಕುವೆಂಪು ನಾಟಕಗಳನ್ನು ಮಳಲಿ ಅವರು ತೀಕ್ಷ್ಣಮತಿಯಿಂದ, ಮುತುವರ್ಜಿಯಿಂದ ಅಧ್ಯಯನ ನಡೆಸಿದ್ದಾರೆ. ವಿಮರ್ಶೆಯ ಸಮತೋಲನವನ್ನು ಕಾಯ್ದುಕೊಂಡೇ ವಸ್ತುನಿಷ್ಠ ಅಧ್ಯಯನವನ್ನು ನಡೆಸಿದ್ದಾರೆ. ಕುವೆಂಪು ಅವರ ದಾರ್ಶನಿಕ ಔನತ್ಯವನ್ನು ಪ್ರತಿ ಹಂತದಲ್ಲೂ ಗುರುತಿಸಿದ್ದಾರೆ. ಕುವೆಂಪು ನಾಟಕಗಳನ್ನು ತುಂಬ ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ನಾಟಕಗಳಲ್ಲಿ ಕಂಡುಬರುವ ಸಾಮಾಜಿಕಪ್ರಜ್ಞೆ, ವೈಚಾರಿಕದರ್ಶನ, ಪ್ರಕೃತಿ ಚಿತ್ರಣವನ್ನು ತುಂಬ ಅರ್ಥಪೂರ್ಣವಾಗಿ ಸಂಶೋಧನೆಯ ತೆಕ್ಕೆಗೆ ತಂದು ವಿಶ್ಲೇಷಿಸಿದ್ದಾರೆ.

ಪ್ರೊ. ದೇಜಗೌರವರು ಈ ಕೃತಿಯ ಬಗ್ಗೆ ಬರೆಯುತ್ತಾ 'ಮಳಲಿಯವರು ಕನ್ನಡ ನಾಡಿನ ಶ್ರೇಷ್ಠ ವಾಗ್ಮಿಗಳು, ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ನೆಲೆಬೆಲೆಗಳನ್ನು ಕಂಡುಕೊಂಡಿರುವ ಘನ ವಿದ್ವಾಂಸರು. ವಿದ್ಯಾರ್ಥಿ ವೃಂದದಲ್ಲಿ ಅಪಾರ ಗೌರವ ಸಂಪಾದಿಸಿರುವ ಉತ್ತಮ ಪ್ರಾಧ್ಯಾಪಕರು, ಕುವೆಂಪು ನಾಟಕಗಳು ಅಷ್ಟೇ ಏಕೆ, ಅವರ ಸಮಗ್ರ ಸಾಹಿತ್ಯದ ಅಭ್ಯಾಸಿಗಳಿಗೆ ಇದೊಂದು ಅನಿವಾರ್ಯವಾದ ಕೀಲಿಕೈಯಾಗಲಿದೆ, ಮಾರ್ಗದರ್ಶಿ ದೀಪ್ತಿಯಾಗಲಿದೆ' ಎಂದಿದ್ದಾರೆ. ಡಿ. ಕೆ. ಚಿದಾನಂದಗೌಡ ಅವರು 'ಕುವೆಂಪು ಅವರ ಅಭಿಮಾನಿಗಳಾದ ಮಳಲಿಯವರು ತಮ್ಮ ಪ್ರಬಂಧದಲ್ಲಿ ಮಾತ್ರ ಯಾವುದೇ ರೀತಿಯ ವೈಯಕ್ತಿಕ ಭಾವನಾನಿಷ್ಠೆಗೆ ಒಳಗಾಗದೆ ವಸ್ತುನಿಷ್ಠೆಯ ಚಿಕಿತ್ಸಕ ದೃಷ್ಟಿ ಉಳ್ಳವರಾಗಿ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳೆರಡನ್ನೂ ಎತ್ತಿ ಹಿಡಿದು ಒತ್ತುಕೊಟ್ಟು ಸೂಕ್ಷ್ಮ ಅಧ್ಯಯನ ನಡೆಸಿದ್ದಾರೆ. ವಿಷಯ, ಭಾಷೆ ಮತ್ತು ಶೈಲಿಗಳು ಓದುಗರನ್ನು ಸಾಮರಸ್ಯದ ದೋಣಿಯಲ್ಲಿ ಮನೋರಂಜನೆ ಮತ್ತು ಮನೋವಿಕಾಸದ ಸಾಹಿತ್ಯ ಯಾತ್ರೆ ಮಾಡಿಸುತ್ತದೆ' ಎಂದು ಅಭಿಪ್ರಾಯಪಡುತ್ತಾರೆ.

ಡಾ॥ ಆರ್. ನರಸಿಂಹಮೂರ್ತಿ ಅವರು 'ಕುವೆಂಪು ಅವರ ನಾಟಕಗಳು ಒಂದು ಅಧ್ಯಯನ' ಮಹಾಪ್ರಬಂಧದಲ್ಲಿ ಶ್ರೀ ಮಳಲಿ ವಸಂತಕುಮಾರ್ ಅವರು ನಾಟಕದ ಮೂಲಭೂತ ಲಕ್ಷಣಗಳು ಮತ್ತು ನಾಟಕದ ಪರಂಪರೆಯನ್ನು

ಕುರಿತು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಗಂಭೀರವಾದ ಅಧ್ಯಯನವನ್ನು ಮಾಡಿದ್ದಾರೆ. ಹಾಗೆಯೇ ಕುವೆಂಪುರವರ ನಾಟಕಗಳನ್ನು ಆಮೂಲಾಗ್ರವಾಗಿ ಪರೀಕ್ಷೆಗೊಳಪಡಿಸಿ ಭಾಷೆ, ಶೈಲಿ, ಛಂದಸ್ಸು, ಪಾತ್ರಚಿತ್ರಣ, ಸನ್ನಿವೇಶಗಳನ್ನು ಕುರಿತು ಸಮರ್ಥವಾಗಿ ವಿಶ್ಲೇಷಣೆ ಮಾಡುವುದರೊಂದಿಗೆ ಶೇಕ್ಸ್‌ಪಿಯರ್ ನಾಟಕಗಳೊಂದಿಗೆ ತೌಲನಿಕ ಅಭ್ಯಾಸವನ್ನೂ ಮಾಡಿದ್ದಾರೆ. ತನ್ಮೂಲಕ ನಾಟಕಕಾರರಾಗಿ ಕುವೆಂಪು ಅವರ ಪ್ರತಿಭೆ ಎಂತಹುದು ಎಂಬುದು ಸ್ಪಷ್ಟ ವೇದ್ಯವಾಗುತ್ತದೆ. ಆದುದರಿಂದ ಕುವೆಂಪು ಅವರ ಸಾಹಿತ್ಯವನ್ನು ಅಧ್ಯಯನ ಮಾಡುವ ಯಾವುದೇ ವಿದ್ಯಾರ್ಥಿ ಈ ಕೃತಿಯನ್ನು ಓದಲೇಬೇಕಾದ ಅನಿವಾರ್ಯತೆಯನ್ನು ಪಡೆದುಕೊಂಡಿದೆ' ಎಂದು ಹೇಳಿರುವುದು ಕುವೆಂಪು ಅವರ ನಾಟಕಗಳ ರಚನೆಯ ಹಿಂದಿರುವ ಮನೋಧರ್ಮದ ಗ್ರಹಿಕೆಗೆ ಬಹಳ ಸಹಕಾರಿಯಾಗಿದೆ.

ಡಾ॥ ಮಳಲಿ ಅವರು ವಿಮರ್ಶೆಯ ಕ್ಷೇತ್ರದಲ್ಲೂ ಹುಲುಸಾದ ಬೆಳೆಯನ್ನು ಬೆಳೆದಿದ್ದಾರೆ. ಪ್ರಬಂಧಸಾಹಿತ್ಯ, ಕದಂಬ, ವಿವಕ್ಷೆ ಮೊದಲಾದವುಗಳನ್ನು ಪ್ರಕಟಿಸಿದ್ದಾರೆ. ಪ್ರಬಂಧಸಾಹಿತ್ಯ ಕೃತಿಯಲ್ಲಿ ಪ್ರಬಂಧದ ಉಗಮ ಮತ್ತು ವಿಕಾಸವನ್ನೂ ಸಮಗ್ರವಾಗಿ ಚರ್ಚಿಸಿದ್ದಾರೆ. ಪ್ರಬಂಧಸಾಹಿತ್ಯದ ಬಗೆಗಳನ್ನು ವಿಶ್ಲೇಷಿಸಿದ್ದಾರೆ. ಕನ್ನಡದ ಶ್ರೇಷ್ಠ ಪ್ರಬಂಧಕಾರರ ಕೃತಿಗಳನ್ನು ಅತ್ಯುತ್ತಮವಾಗಿ ವಿಮರ್ಶಿಸಿರುವುದನ್ನು ಗುರುತಿಸಬಹುದು. ಪ್ರಬಂಧಗಳನ್ನು ಕುರಿತ ಸಮಗ್ರ ವಿವೇಚನೆ ಈ ಕೃತಿಯಲ್ಲಿದೆ. ಪ್ರಬಂಧಗಳನ್ನು ತಾತ್ವಿಕ ನೆಲೆಯಲ್ಲಿ ಚಿಂತನೆ ಮಾಡಿದ್ದಾರೆ. ವ್ಯಾಪಕವಾದ ಅಧ್ಯಯನದಿಂದ ಕೂಡಿದ ಅತ್ಯುತ್ತಮ ಕೃತಿಗಳಲ್ಲಿ ಇದು ಒಂದಾಗಿದೆ.

'ಕದಂಬ' ಇದು ಒಂದು ವಿಮರ್ಶಾ ಕೃತಿ. ವಸ್ತುನಿಷ್ಠವಾಗಿ ತಮ್ಮ ವಿಚಾರಗಳನ್ನು ತರ್ಕಬದ್ಧವಾಗಿ ಸ್ಪಷ್ಟವಾಗಿ, ಸರಳವಾಗಿ, ಸಾಹಿತ್ಯದ ವಿಮರ್ಶೆಯನ್ನು ಮಾಡಿದ್ದಾರೆ. 'ಶಂಸ ಐತಾಳ' ಅವರು ಈ ಕೃತಿ ಕುರಿತು ಹೀಗೆ ಹೇಳಿದ್ದಾರೆ : 'ವಿಮರ್ಶಾ ಕ್ಷೇತ್ರದಲ್ಲಿ ವಸಂತಕುಮಾರ್ ಮಾಡಿದ ಕೆಲಸ ಮಹತ್ವದ್ದಾಗಿದೆ. ಇವರದು ಕಥೆ, ಕವಿತೆ, ವಿಮರ್ಶೆ, ಜಾನಪದ, ಸಂಶೋಧನೆ ಮೊದಲಾದ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಕೆಲಸಮಾಡಿ ಅನುಭವ ಪಡೆದ ಚಿಂತನಶೀಲ ಮನಸ್ಸು ; ಆರಿಸಿಕೊಂಡ ವಿಷಯದ ತಲಸ್ಪರ್ಶಿ ಅಧ್ಯಯನ

ಮಾಡುವ ಪ್ರವೃತ್ತಿ. ಆದ್ದರಿಂದಲೇ 'ಕದಂಬ'ದ ಪ್ರತಿಯೊಂದು ಬರಹವೂ ಶ್ರೀ ಸಿ.ಪಿ.ಕೆ. ಅವರು ಅಭಿಪ್ರಾಯಪಟ್ಟಂತೆ "ಆಯಾ ವಿಷಯವನ್ನು ಕುರಿತು ಇದುವರೆಗೆ ಬಂದಿರುವ ಬರಹಗಳನ್ನು ಹಿಂದಿಕ್ಕುತ್ತವೆ. ಹೃದ್ಯವು ಲಲಿತವೂ ಆದ ಶೈಲಿ ಪುಸ್ತಕವನ್ನು ಸರಾಗವಾಗಿ ಓದಿಸಿಕೊಂಡು ಹೋಗುವಂತೆ ಮಾಡಿದೆ. ಹೀಗಾಗಿ 'ಕದಂಬ' ಕನ್ನಡ ವಿಮರ್ಶಾ ಪ್ರಕಾರಕ್ಕೆ ಒಂದು ಉತ್ತಮವಾದ ಕೊಡುಗೆಯಾಗಿದೆ" ಎಂದಿದ್ದಾರೆ. ಕೃತಿಯ ಭಾಷೆ, ಸರಳ, ಲಲಿತ, ನೇರವಾದ ಶೈಲಿಯಿಂದ ಕೂಡಿದ ಶ್ರೇಷ್ಠ ಕೃತಿಯಾಗಿದೆ.

'ವಿವಕ್ಷೆ' ಕೃತಿಯು ಕನ್ನಡದ ವಿಮರ್ಶಾರಂಗಕ್ಕೆ ಕೊಟ್ಟ ಒಂದು ಅನುಪಮ ಕೊಡುಗೆ ಎಂದೇ ಹೇಳಬೇಕು. 'ಚಂದ್ರಹಾಸ ನಾಟಕ ಸಮೀಕ್ಷೆ' ಕೃತಿಯಲ್ಲಿ ಕುವೆಂಪು ಅವರ 'ಚಂದ್ರಹಾಸ' ನಾಟಕವನ್ನು ವಿವಿಧ ದೃಷ್ಟಿಕೋನಗಳಿಂದ ನೋಡಿ ನಡೆಸಿರುವ ಒಂದು ವಿಶಿಷ್ಟ ವಿಮರ್ಶೆಯ ಸಂಕಲನವಾಗಿದೆ. 'ಕುವೆಂಪು ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ' ಕೃತಿಯು ಕುವೆಂಪುರವರ ಕಾವ್ಯಮೀಮಾಂಸೆ ಹಾಗೂ ಸಾಹಿತ್ಯ ವಿಮರ್ಶಾ ಕೃತಿಗಳ ಕಡೆ ಗಮನ ಸೆಳೆಯುವಂತಹ ಕೃತಿಯಾಗಿದೆ. ವಿಮರ್ಶೆಯನ್ನು ವಿಮರ್ಶಿಸುವ ಬಗೆಯದು ಈ ಕೃತಿ. 'ಸಾಹಿತ್ಯ ಮತ್ತು ಸಂಸ್ಕೃತಿ' ಒಂದು ಉತ್ತಮವಾದ ಪುಸ್ತಕ. ಈ ಕೃತಿಯ ಬಗ್ಗೆ ಡಾ॥ ಪಿ. ಎಸ್. ರಾಮಾನುಜಂ ಅವರು ಹೀಗೆ ಹೇಳುತ್ತಾರೆ: 'ಶಾಸ್ತ್ರಜ್ಞಾನದ ಜೊತೆಗೆ ಆಧುನಿಕ ಆಲೋಚನಾಗತಿಗಳು ಸೇರಿರುವುದು ಮಳಲಿ ಅವರ ಬರವಣಿಗೆಯ ವೈಶಿಷ್ಟ್ಯ. ವಿಸ್ತಾರ, ಆಳ ಹೀಗೆ ಎರಡೂ ಆಯಾಮಗಳನ್ನು ಹೊಂದಿರುವ ಇವರ ಬರವಣಿಗೆ ಕೊಡುವ ಅನುಭವವೂ ವಿಶಿಷ್ಟವೇ' ಎಂದಿದ್ದಾರೆ.

ಡಾ॥ ಮಳಲಿ ಅವರು ಅತ್ಯುತ್ತಮ ಕೃತಿಗಳನ್ನು ಸಂಪಾದಿಸಿಕೊಟ್ಟಿದ್ದಾರೆ. 'ಕವಿಗಳು ಕಂಡ ಕುವೆಂಪು', 'ಕುವೆಂಪು ನಾಟಕ ಸಮೀಕ್ಷೆ', 'ಚಿತ್ರಾಂಗದ ಸಮೀಕ್ಷೆ', 'ಚಂದ್ರಹಾಸ ನಾಟಕ ಸಮೀಕ್ಷೆ', 'ಕುವೆಂಪು ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ', 'ಯದುಗಿರಿಯ ವೀಣೆ', 'ಗ್ರಂಥಾಮೃತ', 'ಸಂಸ್ಕೃತಿ ದೀಪಮಾಲೆ', 'ನಮ್ಮ ಕನ್ನಡ', 'ವಜ್ರಕಿರಣ', 'ಹೊಯ್ಸಳ ಸಂಪದ', 'ಯುಗದ ಕವಿಗೆ', 'ಸರಸತಿಯ ವರಪುತ್ರ', 'ಕನ್ನಡ ದೀಪ' ಹೀಗೆ ಹಲವಾರು ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

'ಕನ್ನಡ ದೀಪ' ಕೃತಿ ಕವಿಗಳು ಕಂಡ ದೇಜಗೌ ಎಂಬ ಪರಿಕಲ್ಪನೆಯನ್ನು

ಇಟ್ಟುಕೊಂಡು ಸಂಪಾದಿಸಿದ ಕೃತಿಯಾಗಿದೆ. 'ಹೊಯ್ಸಳ ಸಂಪದ' ಅಖಿಲ ಭಾರತ 65ನೇ ಹಾಸನ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಹೊರತಂದ ಸಾಹಿತ್ಯ ಸ್ಮರಣ ಸಂಪುಟದ ಸಂಪಾದಕತ್ವ ವಹಿಸಿ ಅದನ್ನು ಸರ್ವಾಂಗೀಣ ಸೌಂದರ್ಯವತಿಯಂತಾಗಿ ಮಾಡಿದ ಕೀರ್ತಿ ಮಳಲಿಯವರದು. ಅಲ್ಲಿಯ ವಿವಿಧ ಬರಹಗಳನ್ನು ಕವಿತೆಗಳನ್ನು ಸಂಗ್ರಹಯೋಗ್ಯವಾದ ಲೇಖನಗಳನ್ನು ಯುಕ್ತ ಪ್ರತಿಭಾವಂತರಿಂದ ಬರೆಯಿಸಿ, ಸಂಪಾದಿಸಿ ಪ್ರಕಟಿಸುವ ಹೊಣೆಗಾರಿಕೆಯನ್ನು ವಹಿಸಿ ಮಳಲಿಯವರು ಸಮರ್ಥನಾಗಿ ಯಶಸ್ಸನ್ನು ಸಾಧಿಸಿದ್ದಾರೆ. ಪ್ರಾಸ್ತಾವಿಕ ಬರಹದ ಗದ್ಯಶೈಲಿ ತುಂಬಾ ರೋಚಕವಾಗಿದೆ. ಅವರ ಲೇಖನಿಯ ಮೂಲಕ ಅವರ ನಿಜಸಾಹಿತ್ಯದ ಆತ್ಮ ನುಡಿಯುವುದನ್ನು ಕಾಣಬಹುದು.

'ಕನ್ನಡ ದೀಪ' ಕೃತಿ ಸಂಪಾದನಾ ಸಾಮಾರ್ಥ್ಯಕ್ಕೆ ಮತ್ತೊಂದು ನಿದರ್ಶನ. ಸಂಕಲನದ ಆರಂಭದಲ್ಲಿ ವಿದ್ವತ್‌ಪೂರ್ಣ ಪ್ರಸ್ತಾವನೆ ದೇಜಗೌರವರ ಶ್ರೀಮಂತ, ಧೀಮಂತ ಗುಣಗಳನ್ನು ಎತ್ತಿತೋರಿಸುತ್ತದೆ.

ವಿಶ್ವಕನ್ನಡ ಸಮ್ಮೇಳನ ನಡೆದ ಐದು ವರ್ಷಗಳ ಅನಂತರ ಅದೇ ಮೈಸೂರಿನ ಲೋಕ ವಿಖ್ಯಾತ ಅರಮನೆಯ ಆವರಣದಲ್ಲಿ ಪರಿಷತ್ತಿನ ಅಮೃತೋತ್ಸವವನ್ನು ಸಮ್ಮೇಳನದ ವಜ್ರಮಹೋತ್ಸವವನ್ನು ನಡೆಸುವ ಸುವರ್ಣಾವಕಾಶ ಒದಗಿ ಬಂದ ಸಂದರ್ಭದಲ್ಲಿ ಹುಟ್ಟಿಬಂದ ಕುಸುಮ ಈ 'ವಜ್ರದೀಪ್ತಿ'. 'ವಜ್ರದೀಪ್ತಿ' ಗ್ರಂಥದಲ್ಲಿ ವಜ್ರಕ್ಕಿರುವ ಬೆಲೆ ಇಲ್ಲಿಯ ಪ್ರತಿಯೊಂದು ಲೇಖನಗಳಿಗಿವೆ. ವಿದ್ವಾಂಸರಿಗೆ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿಮರ್ಶೆಗಳಿದೆ, ಲೇಖನಗಳಿವೆ. 'ಸರಸತಿಯ ವರಪುತ್ರ', 'ಯುಗದ ಕವಿಗೆ' ಇವೆರೆಡೂ ಕೂಡ ಕವಿಗಳ ಕಣ್ಣಲ್ಲಿ ಸಿಪಿಕೆ, ಕವಿಗಳು ಕಂಡ ಕುವೆಂಪು ಕವಿಗಳ ಚಿಂತನೆಗಳನ್ನು ಕಾಣಬಹುದು.

ಡಾ॥ ಮಳಲಿ ಅವರ ಸಾಧನೆಯನ್ನು ಗುರುತಿಸಿ ಹಲವಾರು ಪ್ರಶಸ್ತಿಗಳು ಅವರಿಗೆ ಸಂದಿವೆ. ಅವುಗಳಲ್ಲಿ ಮುಖ್ಯವಾಗಿ 1990ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಹೊಯ್ಸಳ ಪ್ರಶಸ್ತಿ, ಸಾಹಿತ್ಯ ರತ್ನ ಪ್ರಶಸ್ತಿ, ಎಸ್. ಎನ್. ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ' ಮೊದಲಾದವುಗಳು.

ಡಾ॥ ಮಳಲಿ ಅವರ ಜೀವನ ತುಂಬಾ ವೈವಿಧ್ಯಮಯವಾದುದು. ಅವರ

ಬದುಕಿನ ಪ್ರತಿಯೊಂದು ಘಟ್ಟವೂ ಒಂದೊಂದು ಮೈಲಿಗಲ್ಲು. ಪ್ರತಿಭಾವಂತ ವಿದ್ಯಾರ್ಥಿಯಾಗಿ ವಿದ್ಯಾರ್ಥಿ ಸಮುದಾಯಕ್ಕೆ ಮಾದರಿಯಾಗಿದ್ದಾರೆ. ಪ್ರಾಧ್ಯಾಪಕರಾಗಿ ಅನುಕರಣೀಯರಾಗಿದ್ದಾರೆ. ಶ್ರೇಷ್ಠ ಆಡಳಿತಗಾರರಾಗಿ, ಸತ್ಯ ನಿಷ್ಠ ಸಂಪಾದಕ, ಸಂಶೋಧಕ, ಸೃಜನಶೀಲ ಲೇಖಕರಾಗಿ ಮಾಡಿದ ಸಾಧನೆ ನಮ್ಮ ಮುಂದೆ ಇದೆ. ಈಗಾಗಲೇ ಹತ್ತು ಅಭ್ಯರ್ಥಿಗಳು ಡಾಕ್ಟರೇಟ್ ಪದವಿ ಪಡೆದು ಹಲವಾರು ಮಂದಿ ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ.

ಕೃಷಿ ಕುಟುಂಬದ ಗಾಢ ಅನುಭವದ ಹಿನ್ನೆಲೆಯಿಂದ ಬಂದ ಅವರು ವಿಶ್ವವಿದ್ಯಾನಿಲಯದ ಅಧ್ಯಾಪನ ವೃತ್ತಿಯಿಂದ ನಿವೃತ್ತಿ ಹೊಂದಿದ ಅನಂತರವೂ ಕೃಷಿಯನ್ನೇ ನಂಬಿ ಬದುಕನ್ನು ಹಸನುಗೊಳಿಸಿಕೊಳ್ಳುತ್ತಿರುವ ಶ್ರಮಜೀವಿಗಳು. ಮಣ್ಣಿನೊಂದಿಗೆ ಅವರ ಬದುಕು ಮಳೆ ಬಿದ್ದ ನೆಲದ ಪರಿಮಳದಂತೆ ಹದಗೊಂಡು ಮಿಡಿಯುವ ನಿರಂತರ ಕ್ರಿಯೆಯಾಗಿದೆ. ಅವರೊಬ್ಬ ಕೃಷಿ ವಿಜ್ಞಾನಿ, ಜಾನಪದ ತಜ್ಞ, ಕ್ರಿಯಾಶೀಲ ಸೃಜನಶೀಲ ಲೇಖಕರಾಗಿ ಇವತ್ತಿಗೂ ಜ್ಞಾನದ ಭಂಡಾರವಾದ ಅವರು ಇಂದೂ ಕೂಡ ನಡೆಯುವ ಜ್ಞಾನಕೋಶವಾಗಿದ್ದಾರೆ. ಇಂದು ಕೂಡ ಜಾನಪದ ಬಗೆಗಿನ ಆಸಕ್ತಿ ಅವರಿಗೆ ಇರುವುದರಿಂದಲೇ ಅಪಾರ ಕಾರ್ಯಗಳನ್ನು ಮಾಡುತ್ತಿದ್ದಾರೆ.

■

## ಡಾ. ಮಳಲಿ ವಸಂತಕುಮಾರ್

ಮೂಲತಃ ಸೃಜನಶೀಲ ಲೇಖಕರಾದ ಡಾ. ಮಳಲಿ ವಸಂತಕುಮಾರ್ ಗ್ರಾಮದೇವತೆ, ಜನಪದವೈದ್ಯ, ಕೋಲಾಟ ಅಧ್ಯಯನ ಗ್ರಂಥಗಳಿಂದ ಜಾನಪದ ಕ್ಷೇತ್ರದಲ್ಲಿ ಹೆಸರಾಗಿದ್ದಾರೆ. ಅವರ ಜಾನಪದ ನಿಷ್ಠೆ, ಚಿಂತನೆ ಸೋಪಜ್ಞತೆಯಿಂದ ಮೌಲಿಕ ಅಂಶಗಳು ಹೊರಹೊಮ್ಮಿವೆ. ಅವರ ಬದುಕು ಬರಹದ ಮಹತ್ವವನ್ನು ಡಾ. ಟಿ. ಕೆ. ಕೆಂಪೇಗೌಡರು ಆತ್ಮೀಯವಾಗಿ ಪ್ರಸ್ತುತ ಪುಸ್ತಕದಲ್ಲಿ ಪರಿಚಯಿಸಿದ್ದಾರೆ.

–ಪ್ರೊ. ಜಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪
E-mail : janapadaparishath@hotmail.com